ಅಪರಂಜಿ

ಮೇ 97

ತಿಳಿನಗೆಯ ಕಾರಂಜಿ



ಪ್ರಕಾಶ್

ಜಿ. ಎನ್. ಜಿ.

ಸಿ. ಆರ್. ಸತ್ಯ

ಬಿ. ನ. ನರಹರಿ

ಶಿವು

ಕೆ. ಎನ್. ಕೆ.

ನಾ. ಕಸ್ತೂರಿ

ಪ್ರಭಾ

ಅಣ್ಣಾಸ್ವಾಮಿ ಮೊದಲಿಯಾರ್

ನಾಚಿ

ಭೂಷಿ

ಬಿಡಿ ಪ್ರತಿ : 3 ರೂ. 50 ಪೈ



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 14 **ಮೇ 97** **ಸಂಚಿಕೆ-8**

ಯಾವನು ಸುಳ್ಳನ್ನು ಹೇಳುತ್ತಾನೋ ಅವನು ಬೇರು ಸಹಿತವಾಗಿ ಒಣಗಿ ಹೋಗುವನು.

- ಪ್ರಶ್ನೋಪನಿಷತ್

ಕೌಸಲ್ಯ ಹಿರಣ್ಯ ನಾಭನೆಂಬ ರಾಜಪುತ್ರನಿಗೆ, ಅವನ ಗೆಳೆಯನಾದ ಸುಕೇಶಭಾರದ್ವಾಜನು ಹೇಳಿದ ಮಾತು ಇದು. ಷೋಡಶ ಕಲೆಗಳ ಪುರುಷನನ್ನು ಬಲ್ಲೆಯಾ ಎಂದು ಕೌಸಲ್ಯನು ಕೇಳಿದ್ದಕ್ಕೆ ಉತ್ತರವಿದು.

ಸೆಕ್ಯುಲರಿಸಂ ಉಳಿಸಲು ಹದಿಮೂರು ಪಕ್ಷಗಳಿಂದ ಕೇವಲ ಮೈನಾರಿಟಿ. ಇದಕ್ಕೆ ಬೇಲಿ ತ್ರಿಶಂಕು ಪಕ್ಷದ ಬೆಂಬಲ. ಈಗ ಹಠಾತ್ ಬೇಲಿ ಹೊಲವನ್ನು ಮೇಯ್ದು, ತಾನೇ ಮೈನಾರಿಟಿ ಕೆಲಸ ಮಾಡುತ್ತೇನೆ ಎನ್ನುತ್ತದೆ.

ಸೆಕ್ಯುಲರಿಸಂ ಎಂದರೇನು ಎಂದು ಕೌಸಲ್ಯನು ಕೇಳಿದ್ದರೂ, ಸುಕೇಶನು ಅದೇ ಉತ್ತರ ಕೊಡುತ್ತಿದ್ದನೆಂದು ಕಾಣಿಸುತ್ತದೆ.

'ಅಪರಂಜಿ'ಗೇನೆಂತೆ? ಎಂದೆಂದೂ ಕಾಡಿನಲ್ಲೇ ಇದ್ದವಳು. ಅಹಿಂಸೆ, ಶಾಂತಿ, ಸರ್ವಸಮಭಾವ, ಗರೀಬಿ ಹಠಾವ್, ದೊಡ್ಡದೇಶದ (ಓತ್ವ ವಿಲ್ಲದ) ದೊಡ್ಡಜನ, ಸಮಾಜವಾದ, ಎಲ್ಲವೂ ಟಾಂಗ್ ಫಿರಾಂಗ್ ಹೊಡೆದು (ಹಾಗೆಂದರೇನು ಎಂದರೆ ಸುಕೇಶನ ಉತ್ತರವೇ) ನೆಲ್ಲಿಕಾಯಾಗಿ ಹೋದುದನ್ನು ಕಂಡು ಕಣ್ಣೀರೊರೆಸಿಕೊಂಡು ನಕ್ಕವಳು. ಬಹುಮತವಿದ್ದವರು, ತೋರಿಸಿದ ಹಗರಣಗಳ ತಪ್ಪುಗಳು ನುಸುಳದಂತೆ ಹಗರಣ ಮಾಡುವ ಚಾಕಚಕ್ಯತೆ ಇದ್ದೀತು.


ಹೆಂಡ ಹಣಗಳಿಂದ ಜಾತ್ಯುಪಜಾತಿಗಳಿಂದ ಬಂದೂಕು ಬಲಾತ್ಕಾರಗಳಿಂದ ಎಚ್ಚರ ತಪ್ಪಿದ ಜನತೆಯಿಂದ, ಸದರಿ ಕಾರ್ಯಗಳನ್ನು ಮಾಡಬಲ್ಲ ಜನತೆ, ತನಗಾಗಿ ನಡೆಸುವ ಸರ್ಕಾರಕ್ಕೆ ಜಯ್ ಜಯ್ ಅಂದುಬಿಟ್ಟರಾಯಿತು.

ಯಾರಪ್ಪನ ಗಂಟು ಹೋದೀತು?

ಗಂಟು ಇದ್ದರೆ ತಾನೇ, ಹೋಗಲು?

ಶಾಂತಂ ಪಾಪಂ ಶಿವನೇ ಶಂಭುಲಿಂಗ ಅದೂ ಬೇಡ. ಸುಮ್ಮನಿದ್ದರಾಯಿತು.

ಊರಿನವರೆಲ್ಲಾ ಸೇರಿದರೂ ಸುಮ್ಮನಿದ್ದವನನ್ನು ಏನು ಮಾಡಲು ಸಾಧ್ಯವಾಯಿತು? ಗೊತ್ತಿಲ್ಲವೇ? ಕೇಳಿ ತಿಳಿದುಕೊಳ್ಳಿ.





ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್


ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 14 ಮೇ '97 ಸಂಚಿಕೆ-8

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



○ ಪ್ರಕಾಶ್

ಏಪ್ರಿಲ್ ಹನ್ನೊಂದಕ್ಕೆ ವಿಶ್ವಾಸಮತ; ಶರ್ಮ ಗಡುವು - ಸುದ್ದಿ

'ಯಾರ' ವಿಶ್ವಾಸ??

★★★

ನಕಲಿ ಗಡಿಯಾರ ಮಾರುತ್ತಿದ್ದ ಇಬ್ಬರಿಗೆ ಸಜೆ

-ಸುದ್ದಿ

ಅವರ 'ಕಾಲ' ಸನ್ನಿಹಿತವಾಯಿತು!!

★★★

''ಭಾರತಕ್ಕೆ ಶೋಚನೀಯ ಸೋಲು''

-ಪತ್ರಿಕೆ

ಇದು ಕ್ರೀಡಾ ಸುದ್ದಿಯೂ ಆಗಬಹುದು,

ಮುಖಪುಟದ ಶೀರ್ಷಿಕೆಯೂ ಆಗಬಹುದು!!

★★★

ಕಿರಿಯ ಎಂಜಿನಿಯರ್ ಮನೆ ಮೇಲೆ ಧಾಳಿ; 2 ಕೋಟಿ ಆಸ್ತಿ ವಶ

- ಸುದ್ದಿ

ಇನ್ನು 'ಹಿರಿಯ'ರಲ್ಲಿ??

★★★

ದೆಹಲಿಯಲ್ಲಿ ಲಘು ಭೂಕಂಪ

- ಪತ್ರಿಕೆ

ರಾಜಕೀಯ ಬೆಳವಣಿಗೆಗಳಿಂದ ಇರಬೇಕು!

★★★

ವಿಮಾನ ನಿಲ್ದಾಣ; ವಿವಾದ ಇಲ್ಲ - ಮುಖ್ಯಮಂತ್ರಿಗಳು

ನಿಲ್ದಾಣವೇ ಇಲ್ಲ?!

★★★

'ಧರ್ಮಕಾರಣ' ಮುಟ್ಟುಗೋಲಿಗೆ ಸಾಹಿತಿಗಳ

ಆಕ್ರೋಶ; ಅಕಾಡೆಮಿ ಸದಸ್ಯರ ರಾಜೀನಾಮೆ

- ಸುದ್ದಿ


ಧರ್ಮ - ಸಂಸ್ಥಾಪನೆಗಾಗಿ!!

★★★

ದೇಶದಲ್ಲಿ ಒಂದು ಲಕ್ಷ ಕೋಟಿ ಕಪ್ಪು ಹಣ - ಶ್ರೀ ದಂಡವತೆ

ಇಷ್ಟು ನಿಖರವಾಗಿ ಹೇಗೆ ಗೊತ್ತಾಯಿತು??

★★★



''ನಮ್ ಕ್ಲಾಸ್ ಟೀಚರ್ ಮೇಲೆ ನೋ ಕಾನ್ಫಿಡೆನ್ಸ್ ಮೋಷನ್
ತರುಕ್ಕಾಗುಲ್ವೇನೋ?''

ನಮ್ಮ ನಿಮ್ಮಲ್ಲಿ

'ಯುಗಾದಿ ಸಂಚಿಕೆ' ಬಹು ಪಾಲು ಓದುಗರ ಮೆಚ್ಚುಗೆ ಗಳಿಸಿದ ಸೂಚನೆಗಳು ಬಂದಿವೆ. ಜಯರಾಮ ಉಡುಪರ ಕ್ಯಾರಿಕೇಚರ್‌ಗಳು ನಿಜಕ್ಕೂ Superb ಅಂತ ಓದುಗ ಮಿತ್ರರೊಬ್ಬರು ಬರೆದಿದ್ದಾರೆ. Good. ಮೆಚ್ಚಿಯೇ ಬರೆಯಬೇಕೆಂದೇನಿಲ್ಲ. ಮೆಚ್ಚಿಯೋ, ಮೆಚ್ಚದೆಯೋ, ಹೇಗಿದ್ರೂ ಪ್ರತಿಕ್ರಿಯೆ ಬಂದಿದ್ದರೆ, ಮಾಡಿದ ಕೆಲಸಕ್ಕೆ ಸಾರ್ಥಕತೆ ಬರುತ್ತದೆ.

ಯುಗಾದಿ ಸಂಚಿಕೆಯಲ್ಲಿ ಪ್ರಕಟವಾದ ಲೇಖಗಳಲ್ಲಿ ಉತ್ತಮವಾದ ಲೇಖನವೊಂದಕ್ಕೆ ಬಹುಮಾನ ನೀಡುವ ಯೋಜನೆಯನ್ನು ಈ ಹಿಂದೆಯೇ ಪ್ರಸ್ತಾಪಿಸಿದ್ದೆ. ನಮ್ಮ ಹಳೆಯ ಬರಹಗಾರರಾದ ಕೇಫ, ಅರಾಸೇ, ಪ್ರಭು, ಶೀನೂ ಮೊದಲಾದವರು ತಮ್ಮನ್ನು ಈ ಸ್ಪರ್ಧೆಯಿಂದ ಹೊರಗಿಟ್ಟು, ಹೊಸ ಬರಹಗಾರರಿಗೆ ಈ ರೀತಿಯ ಪ್ರೋತ್ಸಾಹ ನೀಡಬೇಕೆಂದು ವಿನಂತಿಸಿಕೊಂಡಿದ್ದಾರೆ. ಈ ದೃಷ್ಟಿಯಿಂದ ನೋಡಿದಾಗ, ಈ ಬಾರಿಯ ಉತ್ತಮ ಬರಹ ಶ್ರೀಮತಿ ಬಿ.ಎಸ್. ಶೈಲಜಾರವರ 'ರಸಾಸ್ವಾದನೆ'ಗೆ ದೊರಕಿದೆಯೆಂದು ತಿಳಿಸಲು ಹರ್ಷಿಸುತ್ತೇನೆ. ಶ್ರೀಮತಿ ಶೈಲಜಾರವರಿಗೆ ಅಪರಂಜಿ ಬಳಗದ ಅಭಿನಂದನೆಗಳು.

'ಅಂತರಂಗ' ಒಂದು ಹವ್ಯಾಸೀ ನಾಟಕ ತಂಡ. ಈ ತಂಡದವರು, ಬರುವ ಜೂನ್/ಜುಲೈ ತಿಂಗಳಲ್ಲಿ, ಕೊರವಂಜಿ ಬರಹಗಾರರಾಗಿದ್ದ ಎಂ.ಎಸ್. ರಾಮಸ್ವಾಮಿಯವರನ್ನು ಸನ್ಮಾನಿಸಲಿದೆ. ಕೊರವಂಜಿ ಬಳಗದವರು ಅಂದಮೇಲೆ ಸನ್ಮಾನ ಸಮಾರಂಭ ಒಂದು ಹಾಸ್ಯ ರಸೋತ್ಸವವಾಗುವುದು ಸಹಜವೇ. ಈ ಕುರಿತು ವಿವರವಾದ ಕಾರ್ಯಕ್ರಮವನ್ನು ಜೂನ್ ತಿಂಗಳ ಅಪರಂಜಿಯಲ್ಲಿ ನೀಡುತ್ತಿದ್ದೇವೆ. ಡಿಸೆಂಬರ್‌ನ ಹಾಸ್ಯೋತ್ಸವದಂತೆಯೇ ಇದೂ ಒಂದು ಅಪೂರ್ವ ಸಮಾರಂಭವಾಗಲಿದೆ. ಎಲ್ಲರೂ ಬನ್ನಿ.

ಅಪರಂಜಿಯಲ್ಲಿ ಹೊಸ ಪ್ರಕಾರಗಳನ್ನು ನೀಡುವ ಯತ್ನ ಸತತವಾಗಿ ನಡೆದಿದೆ. ನಿಮ್ಮೆಲ್ಲರ ಸಲಹೆ, ಸೂಚನೆಗಳಿಗೆ ಸದಾ ಸ್ವಾಗತ.

- ಶಿವಕುಮಾರ್

ಜಠರಾಗ್ನಿ

ಜಿ.ಎಸ್.ಜಿ.

ನಾವಿದ್ದುದು 'ಲಿಗ' ಮನೆ. ಅಂದರೆ ಲೋ ಇನ್‌ಕಂ ಗ್ರೂಪ್ ಮನೆ, ಬಾಡಿಗೆಯದು. ಅದನ್ನು ಬಿಟ್ಟು 'ಮಿಗ'ಗೆ ಹೋದೆವು.

ಮಿಡ್ಲ್ ಇನ್‌ಕಂ ಗ್ರೂಪ್ ಮನೆಗೆ, ಅದೂ ಬಾಡಿಗೆಯದೆ. ಹೋಗಬಾರದಿತ್ತು.

'ಲಿಗ' ನಿಂದ 'ಮಿಗ'ಗೆ ಹೋದ ಹೊಸದರಲ್ಲಿ ಎಲ್ಲವೂ ಚೆನ್ನಾಗಿತ್ತು. ಅದು ಏನಾಯಿತೋ - ನಮ್ಮಾಕೆಗೆ ಇದ್ದಕ್ಕಿದ್ದ ಹಾಗೆ ಶುರು ಆಯಿತು 'ಉರಿ-ಉರಿ'. ಮೊದಲು ಏನಾದರು ತಿಂದರೆ 'ಉರಿ' ಕರಿದ ಪದಾರ್ಥ ತಿಂದರೆ ಉರಿ. ಕರಿದ ಪದಾರ್ಥ ಬಿಟ್ಟಳು. ಎಣ್ಣೆ ಉಳಿಯಿತು. ಉರಿ ಬಿಡಲಿಲ್ಲ. ಖಾರ ಬಿಟ್ಟಳು. ಬ್ರಹ್ಮೇತಿ ಉರಿ ಸರಿಯಾಲಿಲ್ಲ. ಏನು ತಿಂದರೂ ಉರಿ ಕುಡಿದರೂ 'ಉರಿ' ಮನೆ ಮುಂದೆ ನಿಂತರೆ ಉರಿ ಬಿಟ್ಟರೆ ಉರಿ. ಉರಿ-ಉರಿ-ಹೊಟ್ಟೆ ಉರಿ.

ಫ್ಯಾಮಿಲಿ ಆಲೋಪತಿ ಡಾಕ್ಟರು ಇದು 'ಗ್ಯಾಸು' ಎಂದರು.

''ಹೌದು ಸ್ವಾಮಿ, ಮೊದಲಿನಿಂದಲೂ ಇವಳು 'ಗ್ಯಾಸೇ' 'ಗ್ಯಾಸು' ಬಿಡುತ್ತಿದ್ದಾಗ ಚೆನ್ನಾಗೇ ಇದ್ದಳು. ಸುತ್ತಲಿನ ಜನ 'ಗ್ಯಾಸು ಗಾಯಿತ್ರಿ' ಎಂದೇ ಕರೆಯುತ್ತಿದ್ದರು-'ರೈಲು' ಎನ್ನುತ್ತಿದ್ದರು. ಇವಳು ಹೇಳುವುದು 'ರೈಲು' ಎಂದು ಜನಕ್ಕೆ ತಿಳಿಯಿತು ಎಂದು ಇವಳಿಗೆ ತಿಳಿಯಿತು. 'ಗ್ಯಾಸು' ನಿಂತಿತು 'ಉರಿ' ಪ್ರಾರಂಭವಾಯಿತು. ಎಂದೆ.

Antacid ಗಳು ಖಾಲಿ, Jelಗಳುಖಾಲಿ 'ಉರಿ' ನಿಲ್ಲಲಿಲ್ಲ. ಜ್ವಾಲಾಮುಖಿ. ಏನು ತಿಂದರೂ 'ಎದೆಭಗ್' ಬೆಂಕಿ ಹಾಕಿದ ಹಾಗೆ ಆಗತ್ತು. ಎಂಥಾ ಉರಿ ಇದೇ ಉರಿ ಹೊರಗೆ ಬೆಚ್ಚಿದ್ದರೆ ಎಷ್ಟು fuel ಉಳಿತಾಯ!

ಡಾಕ್ಟರು Specialist ಗೆ ಬರೆದು ಕೊಟ್ಟರು. ಆತ 'ಉರಿತಜ್ಞ' ಇಪ್ಪತ್ತೆರಡು ಅಡಿ ಉದ್ದದ ಕೊಳವೆ. ಅದರ ಒಂದು ತುದಿಗೆ ಚಿಕ್ಕ ಕನ್ನಡಿ-ಇನ್ನೊಂದು ತುದಿಗೆ ಚಿಕ್ಕ ದೀಪ. ಎರಡು ಹೆಡೆ ಕರಿ ನಾಗರ. ದೀಪದ ಕೊನೆಯುನ್ನು ಇವಳ ಬಾಯೊಳಗೆ ತೂರಿಸಿ ''ನುಂಗಿ ನಿಧಾನವಾಗಿ ನುಂಗಿ - ಹಾಗೆಯೇ ನುಂಗುತ್ತಾ ಇರಿ'' ಎಂದರು ಡಾಕ್ಟರು.

ಪಾಪ! ಇವಳೆಂದಳು.

'ಡಾಕ್ಟರ್-ಹೊಟ್ಟೆ ಉರಿ ತಡೆದುಕೋಬಹುದು ಇದನ್ನು ಹ್ಯಾಗೆ ನುಂಗೋದು?!'

''ಹೌದಮ್ಮಾ ಕಷ್ಟ - ನುಂಗುವುದಕ್ಕೂ ಅಭ್ಯಾಸಬೇಕು ಕೆಲವರು ಏನನ್ನೂ ಬೇಕಾದರೂ ನುಂಗುತ್ತಾರೆ. ನುಂಗೊದನ್ನು ಕಲಿತಿದ್ದರೆ ಉರೀನೇ ಇರ್ತಿರಲಿಲ್ಲ. ನಿಧಾನವಾಗಿ ನುಂಗಿ ಅಭ್ಯಾಸ ಮಾಡಿಕೊಳ್ಳಿ'' ಎಂದರು ಡಾಕ್ಟರು.

ಕೊಳವೆ ಒಳಕ್ಕೆ ಇಳಿದಂತೆಲ್ಲಾ ಹೊರಗೆ ಕನ್ನಡಿಯಲ್ಲಿ ನೋಡುತ್ತಿದ್ದರು ಡಾಕ್ಟರು

ನನಗೂ ತೋರಿಸಿರು.

''ಡಾಕ್ಟರೇ - ಧನ್ಯನಾದೆ - ಜನ್ಮ ಸಾರ್ಥಕವಾಯಿತು. ಬಾಹ್ಯ ದರ್ಶನವಾಗಿತ್ತು ನಿಮ್ಮ ದಯೆ- ಅಂತರಂಗ ದರ್ಶನವಾಯಿತು ಎಂದೆ

''ನೋಡಿ ಆ ತುದಿಯಿಂದ ಈ ತುದಿಯವರೆಗೂ ನೋಡಿದ್ದೇನೆ. ಅಂಥದೇನೂ Organic ಆಗಲೀ Physical ಆಗಲೀ ಇಲ್ಲ. mucous membranc ಕೆಲವು ಕಡೆ ಕಿತ್ತಿದೆ. ಮಾತ್ರೆ ಬರೆದು ಕೊಡುತ್ತೇನೆ. ಹೊತ್ತಿಗೆ ಎರಡರಂತೆ ದಿನಕ್ಕೆ ಮೂರು ಸಲ ಮೂವತ್ತು ದಿನ. ಒಂದು ತಿಂಗಳು ಬಿಟ್ಟು ಬನ್ನಿ'' ಎಂದರು.

ನೂರಾ ಎಂಭತ್ತು ಮಾತ್ರೆಗಳು, ಎರಡು jel ಬರೆದುಕೊಟ್ಟರು. ಕಡಿಮೆಯಾದವು ಮಾತ್ರೆಗಳು. 'ಹೊಟ್ಟೆ ಉರಿ' ಜಪ್ಪಯ್ಯಾ ಎನ್ನಲಿಲ್ಲ.

★

''ಇಂಗ್ಲೀಷ್ ಡಾಕ್ಟರು ಪ್ರಯೋಜನವಿಲ್ಲಯ್ಯಾ. ಮಲ್ಲೇಶ್ವರದ ಪಂಡಿತರ ಪಂಡಿತರ ಹತ್ತಿರ ಹೋಗು. ಅವರು ಬಹಳ ಫೇಮಸ್ಸು ಎಂದರು ಮಿತ್ರರು.

ಇವಳ ಜೊತೆ ಏಳು ಹೆಜ್ಜೆ ಧರ್ಮೇಚ- ಅರ್ಥೇಚ- ಕಾಮೇಚ ಎಂದು ಮಾತು ಕೊಟ್ಟು ಸುತ್ತಿದ್ದೇನೆ. ಏಳು-ಬೀಳು ಎಲ್ಲದರಲ್ಲೂ ಜನುಮದ ಜೋಡಿ ಕಷ್ಟ-ಸುಖ ಹಂಚಿಕೊಂಡಿದ್ದೇವೆ. 'ಹೊಟ್ಟೆ ಉರಿ' ಹೇಗೆ ಹಂಚಿಕೊಳ್ಳುವುದು? ತಿಳಿಯಲಿಲ್ಲ. ಹೋದೆವು ಪಂಡಿತರ ಹತ್ತಿರ.

ಅವರು ಪಂಡಿತರು ಇವಳ ಕೈ ಹಿಡಿದರು. ಕಣ್ಣು ಮುಚ್ಚಿದರು. ಅಂದರೆ 'ನಾಡಿ' ನೋಡಿದರು.

'ತ್ರಿದೋಷಗಳಲ್ಲಿ ಪಿತ್ತದ್ದು ಕಫದ್ದು ಏನೂ ಇಲ್ಲ. ಇದು ತೀವ್ರ ವಾತ ದೋಷ ವಾಯು ಪ್ರಕೋಪ''

''ಸುಣ್ಣದ ತಿಳಿ ಮೂರು ಸೌಟು ಅದೇ ಟೇಬಲ್ಲು ಸ್ಪೂನು ದಿನಕ್ಕೆ ಆರು ಹೊತ್ತು ಇಪ್ಪತ್ತೊಂದು ದಿನ ಕುಡಿಸಿ ನಂತರ ನೋಡೋಣ'' ಎಂದರು ಪಂಡಿತರು.

''ಡಾಕ್ಟರೇ- ಅಲ್ಲ ಪಂಡಿತರೇ ಮಾರಮ್ಮನ ಹಬ್ಬದಲ್ಲಿ ಕೋಣನ್ನ ಬಲಿ ಕೊಡ್ತಾರಲ್ಲ ಆದಕ್ಕೆ ಮುಂಚೆ ಕೋಣನ ಕೊಬ್ಬು ಇಳಿಸಲು ಸುಣ್ಣದ ತಿಳಿ ಕುಡಿಸ್ತಾರೆ. ನೀವು ಎಲ್ಲಾ ಬಿಟ್ಟು ಇವಳಿಗೆ ಸುಣ್ಣದ ತಿಳಿ ಕುಡಿಸು ಎನ್ನುತ್ತೀರಲ್ಲ!'' ಎಂದೆ ಕಳವಳದಿಂದ.

''ಹಳೇ ಕೊಬ್ಬು ಇಳಿಸಬೇಕಯ್ಯಾ ಅದೇ ವಾತ- ಪ್ರಕೋಪ'' ಪಂಡಿತರು ಹೇಳಿದರು ಸ್ವಸ್ಥ ಧ್ವನಿಯಲ್ಲಿ.

ಮೂರು ಸೌಟು ಆರು ಹೊತ್ತು ಇಪ್ಪತ್ತೊಂದು ದಿನ ಎಂದರೆ ಒಂದು ಬಕೆಟ್ಟು ಆಯಿತು. ಸುಣ್ಣದ ತಿಳಿ ನೀರು ಅವಳಿಗೆ. ಸುಣ್ಣ ಮನೆಗೆ ಆಯಿತು. 'ಹೊಟ್ಟೆ ಉರಿ' ಯಥಾ ಸ್ಥಿತಿ.

★

ಇದೆಲ್ಲಾ ಯಾವ ದೊಡ್ಡ ಖಾಯಿಲೆ ಶಿವಾಜಿನಗರದ ಮಲೆಯಾಳಿ ಪಂಡಿತ 'ನಂಬೂದಿರಿ'ಗೆ ತೋರಿಸು ಎಂದ ಇನ್ನೊಬ್ಬ ಮಿತ್ರ.

ನಮ್ಮ ಯಾತ್ರೆ - ಶಿವಾಜಿನಗರಕ್ಕೆ ನಂಬೂದಿರಿ - ಪರೀಕ್ಷೆ ಮಾಡಿ, ''ಮೂರು ತೆಂಗಿನ ಕಾಯಿ ತಂದಿಟ್ಟು ಮೂರು ದಿನ ಬಿಟ್ಟು ಬನ್ನಿ'' ಎಂದು ಕಳಿಸಿದ.

ಮೂರು ದಿನದಲ್ಲಿ ಕೊಬ್ಬರಿ ತಿಂದು ಕಂಟ ಸುಟ್ಟು ಇದ್ದಿಲು ಮಾಡಿ ಅದರಿಂದ ಮಾಡಿದ ಮಾತ್ರೆಗಳನ್ನು ಮಾತ್ರೆ! ಏನು! ಇದ್ದಿಲು ಕೊಟ್ಟು - ನೂರು ದಿನ- ದಿನಕ್ಕೆ ಮೂರು- ಮೂರು ಸಲಿ ಎಂದು ಕಳಿಸಿದ ನಮ್ಮನ್ನು.

ಸಂಜೆ ಆಫೀಸಿನಿಂದ ಬಂದು ನೋಡುತ್ತೀನಿ!

''ಇದೇನೆ?! ಗಡ್ಡ ಮೀಸೆ'' ಎಂದೆ. ಮೂತಿ ಎಲ್ಲಾ ಕಪ್ಪಾಗಿತ್ತು. ನಂಬೂದಿರಿ ಮಾತ್ರೆ ಮಹಿಮೆ. ಇದ್ದಿಲು ತಿನ್ನಿಸಿದ್ದಾಯಿತು. ಉರಿ ಕಡಿಮೆಯಾಗಲಿಲ್ಲ.

★

ಹುರಿದ ಜೀರಿಗೆ ಕಷಾಯ - ನಾರು- ಬೇರು- ಹಾಳು- ಮೂಳು ಎಲ್ಲಾ ಆಯಿತು.

ಸೌತೆಕಾಯಿ ಎಳೆಯದು ಎಂದರು. ಆಯಿತು ಎಳೆಯದು ಯಾಕೆ ಕೊಟ್ಟಿರಿ- ಬಲಿತು ಹಣ್ಣಾದ್ದು ಕೊಡಿ ಎಂದರು- ಅದೂ ಆಯಿತು. ಹಸಿ ಸೊಪ್ಪು - ಸದೆ-ಸೋರೇ ಕಾಯಿ ಎಂದರು. ಆಯಿತು. ಅಕ್ಕಿ ತೊಳದ ನೀರು- ಅರ್ಥಾತ್ ಕಲಗಚ್ಚು ಎಂದರು ಅದೂ ಆಯಿತು. ಇನ್ನು ಕತ್ತಿಗೆ ಹಗ್ಗ ಕಟ್ಟಿ ಕೊಟ್ಟಿಗೇಲಿ ಗೂಟಕ್ಕೆ ಬಿಗಿಯುವುದೊಂದೇ ಬಾಕಿ. ನಿಷ್ಫಲ.

★

''ಮಾನಸಿಕ ಇರಬಹುದು-ಸೈಕೋ ಸೊಮ್ಯಾಟಿಕ್ ಇರಬಹುದು ನಿಮ್ಹಾನ್ಸ್‌ಗೆ ಒಂದು ಸಲ ತೋರಿಸು'' ಎಂದರು ಆಪ್ತರು.

''ಹುಚ್ಚರ ಆಸ್ಪತ್ರೆ ಎನ್ನಿ. ಅದೊಂದೇ ಉಳಿದಿರೋದು'' ಎಂದೆ.

ಹುಚ್ಚರಾಸ್ಪತ್ರೆ ಡಾಕ್ಟರು ಪರೀಕ್ಷೆ ನಂತರ

''ತಲೆ ಸರಿಯಾಗಿದೆ'' ಎಂದರು

ಯಾರದ್ದು? ಎಂದು ಕೇಳಲಿಲ್ಲ ನಾನು.

''ಇದುವರೆಗೂ ತಲೆ ಸರಿಯಾಗಿದೆ ಸ್ವಾಮಿ- ಬಂದಿರೋದು ಹೊಟ್ಟೆಗೆ ಇನ್ನೂ ಬಿಟ್ಟರೆ ತಲೆಗೂ ತಿರುಗಿತ್ತೆ'' ಎಂದೆ.

''ಅದಕ್ಕೆ ನಾವು ಜವಾಬುದಾರರಲ್ಲ- ತಲೆಕೆಟ್ಟ ಮೇಲೆ ಬನ್ನಿ'' ಎಂದು ಕಳಿಸಿದರು.

''ನೋಡಿ ಇದು ಜನ್ಮಕ್ಕೆ ಹತ್ತಿದ್ದು ಅಂತ ಕಾಣುತ್ತೆ'' ಎಂದು ಬಿಟ್ಟಳು ಬೇಸರದಿಂದ.

ಊಟ-ತಿಂಡಿ-ಸುಧಾರಿಸಿತ್ತು-ಸುತ್ತಳತೆ-ತೂಕವ್ಯತ್ಯಾಸವಾಗಿರಲಿಲ್ಲ. ಆದರೆ ಹೊಟ್ಟೆ ಉರಿ ಹೋಗಿರಲಿಲ್ಲ.

ಇದೆಂಥಾ ಜಠರಾಗ್ನಿ? ಜ್ವಾಲಾ ಮುಖಿ ಕೆಲವು ಸಲ ಭುಗಿಲ್ಲನೆ ಎದ್ದುಬಿಡುತ್ತಿತ್ತು. ಆದೂ, ನಾನು ಬೆಳಿಗ್ಗೆ 'ಮೂಡ್'ನಲ್ಲಿದಾಳೆ ಎಂದುಕೊಂಡು ಆಫೀಸಿಗೆ ಹೋಗಿ ಸಂಜೆ-ಹೂ-ಹಣ್ಣು- ಚಿಗುರಲೆ-ತಂದು ಸಿನಿಮಾಕ್ಕೂ ಕರೆದುಕೊಂಡು ಹೋಗಿ ಬಂದ ಮೇಲೆ ರಾತ್ರಿ 'ಮೂಡು - ಆಫ್' eruption of vulcano ಜಠರಾಗ್ನಿ ಭಗ್-ಭಗ್. ವಿಫಲ ಪ್ರಯತ್ನ.

☆

ಏನಾಶ್ಚರ್ಯ! ಪವಾಡ! ಹೊಟ್ಟೆ 'ಉರಿ ಇದ್ದಕ್ಕಿದ್ದಂತೆ ಮಾಯ - ಜಠರಾಗ್ನಿ ಶಮನ-ಜ್ವಾಲಾಮುಖಿ ತಣ್ಣಗಾಗಿತ್ತು.

ಕಾರಣ ತಡವಾಗಿ ಮಂದಟ್ಟಾಯಿತು

☆☆☆

L.I.G. ಮನೇಲಿದ್ದಾಗ - ನಾವೇ ದೊಡ್ಡೋರು

M.I.G.ನಲ್ಲಿ ಎಲ್ಲಾ ನಮ್ಮಪ್ಪ ನಂಥೋರು.

ನಾನು - ಎಂಜಿನಿಯರ್ರು BE -ಸಿವಿಲ್ಲು. ಸರ್ಕಾರಿ ಕೆಲಸ ಆದರೂ-ಆಫೀಸಿಗೆ ಸೈಕಲ್ಲು -ಇಲ್ಲ BTS.

ಮಾರ್ಕೆಟ್ಟಿಗೆ-ಸೈಕಲ್ಲು. ಇವಳಿಗೆ ಕಾಟನ್ ಸೀರೆ- ಕರಿಮಣಿಸರ- ಗಾಜಿನಬಳೆ- ಬಿಟ್ಟರೆ ಬ್ಯಾರೆ ಇಲ್ಲ.

ಎದುರು ಮನೇಲಿ- ಅವನೋ ಕೇವಲ ಡಿಪ್ಲಮೋ- ಅವನೂ ಸಿವಿಲ್ಲು- ಅವನದೂ ಸರ್ಕಾರಿ ಕೆಲಸ ಅವನಿಗೆ ಕಾರು ಸ್ಕೂಟರು ಹೆಂಡತಿ ದಿನಾಲು ಉಡೋದೇ ರೇಶಿಮೆ ಸೀರೆ, ಮೊಣಕ್ಕೈ ತನಕ ಬಳೆ ಚಿನ್ನದ್ದು, ಕೊರಳು ಉಳುಕೋವರೆಗೂ ಚಿನ್ನದ ಭಾರ.

ಜ್ವಾಲಾಮುಖಿ ಒಳಗೊಳಗೆ 'ಲಾವಾ'; ಕುದಿದು ಕುದಿದು ಹೊರ ಬರಲಾರದೇ ಬಿರಿದು ಜಠರಾಗ್ನಿಯಾಗಿ ಕಾದು ಕಾಣಿಸಿ ಕಾಡಿತ್ತು.

☆

ಹೀಗೊಂದು ದಿನ ಎದುರು ಮನೆ ಮುಂದೆ ನೀಲಿ ವ್ಯಾನೊಂದು ನಿಂತಾಗಿ ಅದರಿಂದ ಖಾಕಿದಾರಿಗಳು ಇಳಿದಾಗ ಮನೆ ಸಾಮಾನುಗಳನ್ನು ಹೊರಗೆ ಹಾಕಿದಾಗ ಡಿಪ್ಲಮೋ ಸಿವಿಲ್ಲುನತ'ಶಿರ'ನಾಗಿ ವ್ಯಾನು ಏರಿದಾಗ ಆತನ ಮನೆಯಾಕೆ ಮದುಡಿದಾಗ, ಬೀದಿಜನ ನಿಂತು ಬಿಟ್ಟಿ ಸಿನೆಮಾ ನೋಡಿದಾಗ ಜಠರಾಗ್ನಿ ಆರಿ ಜ್ವಾಲಾಮುಖಿ ತಣ್ಣಗಾಗಿ

''ಉರಿ ಬಾರದಾಗಿತ್ತು ಕಣ್ರೀ ಆಕೆ ಅಷ್ಟು'' ಎಂದಳು.

''ಉರಿದದ್ದು ಯಾರೆ?'' ಎಂದೆ

ಉತ್ತರಕ್ಕೆ ಕಾಯಲಿಲ್ಲ.

ಹೇಲ್ ಬಾಪ್ ಹಗರಣ

- ಸಿ.ಆರ್. ಸತ್ಯ

ನನ್ನ ಸೋದರಮಾವ ಕೋದಂಡೂಗೂ - ನಾಲ್ಕು ಸಾವಿರ ವರ್ಷ ಕಾಣಿಸಿಕೊಳ್ಳದೇ ಓಢೀರ್ ಅಂತ ಈಗ ನಮಗೆ ದರ್ಶನ ಕೊಡೋಕ್ಕೆ ಬಂದಿರೋ ಹೇಲ್ ಬಾಪ್ ಧೂಮಕೇತುಗೂ ಅದ್ಹೇಗೆ ಸಂಬಂಧ ಬೆಳೀತು ಅಂತ ನೀವು ಕೇಳಬಹುದು. ಇದಕ್ಕೆ ಉತ್ತರ ಅವನ ಹೆಂಡತಿ ಬಿಂದು ಹೇಳೋ ಹಾಗೆ: ''ಆ ದೇವರಿಗೇ ಗೊತ್ತು! ಇಲ್ಲಾ, ಇಲ್ಲಾ, ಆ ದೇವರಿಗೂ ಗೊತ್ತಿಲ್ಲ!!''

ನಮ್ಮ ನಿಮ್ಮ ತರ ಈ ಕೋದಂಡೂ ಯಾವಾಗಲೂ ಸ್ವಲ್ಪ ಸಬ್‌ನಾರ್ಮಲ್‌ನಿಂದ ನಾರ್ಮಲ್ ರೇಂಜ್ನಲ್ಲೇ ಇರ್ತಿದ್ದ. ಆದರೆ ಮೂರು ತಿಂಗಳ ಹಿಂದೆ ಹೇಲ್ ಬಾಪ್ ಧೂಮಕೇತು ಮಾರ್ಚಿ ಏಪ್ರಿಲ್ ಸಮಯದಲ್ಲಿ ಭೂಮಿ ಪಕ್ಕ ಹಾದುಹೋಗುತ್ತೆ, ಮನಗೆಲ್ಲರಿಗೂ ಬರೀ ಕಣ್ಣಿಗೇ ಗೋಚರವಾಗುತ್ತೆ ಅಂತ ಪೇಪರ್ ಸುದ್ದಿ ನೋಡಿದ ಮೇಲೆ ಕೋದಂಡು ಸ್ವಲ್ಪ ಅಬ್‌ನಾರ್ಮಲ್ ಆದ. ಬಿಂದು ಹೇಳೋ ಪ್ರಕಾರ, ಆ ಸುದ್ದಿ ಓದಿದ ದಿನದಿಂದ, ಕೋದಂಡು ಮನೆ ತಾರಸಿ ಮೇಲೆ ಹತ್ತಿ ಆಕಾಶ ನೋಡೋಕ್ಕೆ ಶುರುಮಾಡಿದ್ದಂತೆ. ನಮಗೆಲ್ಲಾ ತಿಳಿದ ಹಾಗೆ ಕೋದಂಡು ಯಾವ ಪ್ರಸಿದ್ಧ ಅಸ್ಟ್ರಾನಮರ್ ಏನೂ ಅಲ್ಲ. ಎಸ್.ಎಸ್.ಎಲ್ಸಿ. ಢುಂ ಹೊಡೆದು ಈಗ ಮಲ್ಲೇಶ್ವರಂನಲ್ಲಿ ಇಡ್ಲಿ ಕಾಫಿ 'ಸಂದರ್ಶಿನಿ' ನಡಿಸ್ತಿದಾನೆ. ಅವನು ಆಕಾಶದ ಕಡೆ ಕತ್ತೆತ್ತಿ ನೋಡೋದು ಅಂದ್ರೆ, ಮಳೆ ಬರುತ್ತೆ ಅಂತ ತಿಳ್ಕೊಳೋಕ್ಕೆ ಅಷ್ಟೆ. ಸೂರ್ಯ ಚಂದ್ರನ್ನ ಗುರುತು ಹಿಡಿತಾನೆ ಅಷ್ಟೆ. ನ್ಯೂ ಇಯರ್ ಪಾರ್ಟಿ ಅಂತಹ ಸಮಯದಲ್ಲಿ ತನ್ನ ಸಂದರ್ಶಿನಿ ಕಾಫಿ ಬದಲು ಎಲ್ಲಾದರೂ ಹೋಗಿ 'ಗುಂಡು' ಹಾಕಿದಾಗ ಕೆಲವು ನಕ್ಷತ್ರಗಳನ್ನು ನೋಡಿದ್ದು ಬಿಟ್ಟರೆ ಅವನಿಗೆ ಆಕಾಶದಲ್ಲಿ ಯಾವ ಆಸಕ್ತೀನೂ ಇರಲಿಲ್ಲ ಬಿಡಿ.

ಇಂತಹ ಪ್ರಾಣಿ ಒಂದು ದಿನ ಬಿಂದೂನ ತಾರಸಿ ಮೇಲೆ ಕರೆದು ''ಹೇಲ್ ಬಾಪ್ ಬಗ್ಗೆ ನಾನು ಒಂದು ಡೀಪ್ ಸ್ಟಡಿ ಮಾಡ್ತಿದೀನಿಕಣೆ. ನನ್ನನ್ನ ಡಿಸ್ಟರ್ಬ್ ಮಾಡಬೇಡ. ಉಪ್ಪೇರಿ, ಸ್ಟ್ರಾಂಗ್ ಕಾಫಿ ಇಲ್ಲಿಗೇ ನಂಗೆ ತಂದ್ಕೊಟ್ಟುಬಿಡು. ಕಾಮೆಟ್ ಕಾಣಿಸ್ದಾಗ ನಿನಗೂ ತೋರಿಸ್ತೀನಿ'' ಅಂತ ಅಂದ. ಬಿಂದು ಎಷ್ಟಾದರೂ ಹೌಸ್‌ವೈಫ್ ಅಂತ ಹೆಸರು ಹೊತ್ತವಳು ಅಲ್ಲವೆ? ''ರೀ, ಯಾಕ್ರೀ ಆ ಹುಚ್ಚು ನಿಮಗೆ? ಚಿಪ್ ಪ್ಯಾಕೆಟ್‌ಗಳು ಕಾಫೀ ಪುಡಿ ಹೇಳದೇ ಕೇಳದೇ ಖರ್ಚಾಗುತ್ತೆ. ಅದೇ ಸಂದರ್ಶಿನೀಲಾದರೂ ಇಟ್ಟರೆ ನಮಗೇ ಬಿಸಿನೆಸ್ ಆದರೂ ಜಾಸ್ತಿ ಆಗುತ್ತೆ'' ಅಂತ ಬುದ್ಧಿ ಹೇಳಿದಳು. ಕೋದಂಡು ಕೇಳ್ತಾನ್ಯೆ? ''ನಿನ್ನ ತಲೆ. ಜೀವನದ ಪೂರ್ತಿ ಇಡ್ಲಿ ವಡೆ ಒನ್ ಬೈಟೂ ಕಾಫೀ ಅಂತ ಕೂತಿರೋಕ್ಕೆ ಆಗುತ್ತೇನೆ? ಇಂತಹಾ ಹವ್ಯಾಸಗಳೂ ಮನುಷ್ಯಂಗೆ ಇರಬೇಕು'' ಅಂಥ ರೇಗಿದ. ಪಾಪ ನಮ್ಮ ಬಿಂದು ಅವನ ತರಹ ಹಠವಾದಿಯಲ್ಲ. ಒಂದು ವಾರ ಡಿಸ್ಟರ್ಬ್ ಮಾಡದೇ ಬಿಟ್ಟಳು. ಆಮೇಲೆ ತಾರಸಿ ಮೇಲೆ ಹೋದಳು. ಕೋದಂಡು ದೂರದಲ್ಲಿ ಕಾಣುತ್ತಿದ್ದ ಶಂಕರ್ ಅಯ್ಯರ್ ಮನೆ ನೀರಿನ ಟ್ಯಾಂಕ್‌ನೇ ನೋಡ್ತಿದ್ದ. ''ಆ ಟ್ಯಾಂಕ್ ಪಕ್ಕಾನೇ ಕಣೆ ಹೇಲ್ ಬಾಪ್ ಕಾಣೋದು'' ಅಂತ ಅಂದ. ಬಿಂದೂಗೆ ಅನುಮಾನ ಬಂತು. ''ಅಲ್ರೀ, ಅದು ದಕ್ಷಿಣ ದಿಕ್ಕು ಅಂತ ಗೊತ್ತಿಲ್ವೆ? ನಾನು ಪೇಪರಿನಲ್ಲಿ ಓದಿದ ಪ್ರಕಾರ ಕಾಮೆಟ್ ಪಶ್ಚಿಮದಲ್ಲಿ ಕಾಣುತ್ತೆ ಅಂತ ಇತ್ತಲ್ರೀ?'' ಅಂತ ಕೇಳಿದಳು. ಕೋದಂಡು

ಕಕ್ಕಾಬಿಕ್ಕಿಯಾದ. ''ಮುಂಚೇನೆ ಯಾಕೆ ಹೇಳಲಿಲ್ಲವೆ?'' ಅಂತ ಕೂಡಾಗಿದ. ''ಒಟ್ಟಿನಲ್ಲಿ ಹತ್ತು ಪ್ಯಾಕೆಟ್ ಚಿಪ್ಸ್, ಅರ್ಧ ಕೇಜಿ ಕಾಫಿಪುಡಿ ಈಗಾಗಲೇ ಹೋಮ ಮಾಡಾಯ್ತು. ಆ ಕಾಮೆಟ್ ಕಣ್ಣಿಗೆ ಬಿದ್ದು ಹೋಗೋ ತನಕ ಇನ್ನೆಷ್ಟು ಖರ್ಚೋ?'' ಅಂತ ಬಿಂದೂವಿನ ಯೋಚನೆ.

ಸರಿ, ಪೇಪರ್ ರಿಪೋರ್ಟ್ ಪ್ರಕಾರ ಕಾಮೆಟ್ ಕಣ್ಣಿಗೆ ಬೀಳೋ ದಿನ ಕೋದಂಡು ಪಶ್ಚಿಮದ ಕಡೆ ನೋಡೋದು, ಉಪ್ಪೇರಿ ತಿನ್ನೋದು, ಮತ್ತೆ ಆ ಕಡೆನೋಡೋದು ಉಪ್ಪೇರಿ ತಿನ್ನೋದು, ಹೀಗೆ ಅರ್ಧ ಘಂಟೆ ಕಳೆದು ಯಾವ ಕಾಮೆಟ್ಟೂ ಅವನ ಕಣ್ಣಿಗೆ ಬೀಳಲಿಲ್ಲ. ಬಿಂದೂನ ಒಂದೆರಡು ಸಲ ಕರೆದು ನಿನ್ನ ಕಣ್ಣಿಗೆ ಏನಾದರೂ ಕಾಣಿಸ್ತಿದ್ಯೇನೆ ಅಂತ ಕೇಳಿದ. ಬಿಂದು ಕಣ್ಣಿಗೆ ಬಿದ್ದಿದ್ದು ಗಾಳೀಲಿ ತೇಲಿ ಹೋಗಿದ್ದ ಉಪ್ಪೇರಿಯ ಖಾಲಿ ಪ್ಯಾಕೆಟ್‌ಗಳು! ಕೋದಂಡು ಇನ್ನೂ ಸೀರಿಯಸ್ ಆದ. ಪಶ್ಚಿಮ ದಿಕ್ಕಿನಲ್ಲಿ ತನ್ನ ಕಣ್ಣು ಕೈಗಳಿಂದಲೇ ಒಂದು ಇಮ್ಯಾಜಿನರಿ ವ್ಯೂಯಿಂಗ್ ಫ್ರೇಮ್ ಮಾಡಿಕೊಂಡು, ಸೂಕ್ಷ್ಮವಾಗಿ ವೀಕ್ಷಿಸಿ, ''ನೋಡೇ, ಹೇಲ್‌ಬಾಪ್ ಬಂದರೆ ನಮ್ಮ ಚಂದ್ರು ಮನೆ ಸ್ಟೇರ್ ಕೇಸ್ ರೂಮಿನ ಪಕ್ಕ ಕಾಣಿಸುತ್ತೆ. ಇವತ್ತು ಆಕಾಶದಲ್ಲಿ ಏನೋ ಗಲಿಬಿಲಿ ಇರಬೇಕು. ಖಂಡಿತಾ ಇವತ್ತೋ ನಾಳೇನೋ ಕಾಣುತ್ತೆ'' ಅಂತ ಸ್ಟೇಟ್‌ಮೆಂಟ್ ಕೊಟ್ಟ. ಬಿಂದು ಏನೋ ಗೊಣಗಿಕೊಂಡಳು.


ಮಾರನೇ ದಿನ ಅವರ ಫ್ಯಾಮಿಲಿ ಫ್ರೆಂಡು ಚಂದ್ರು ಕೋದಂಡೂಗೆ ಫೋನ್ ಮಾಡಿದ. ''ಏನಪ್ಪಾ, ನಮ್ಮನೇ ಕಡೇನೇ ನೋಡ್ತಿದೀಯಂತೆ? ನಾನು ಜಸ್ಟ್ ಮ್ಯಾರೀಡ್ ಕಣೋ!'' ಅಂತ ಜೋಕ್ ಹೊಡೆದ. ''ನಿನ್ನ ಚೆಲ್ಲಾಟ ಕಟ್ಕೊಂಡು ನನಗೇನು ಆಗಬೇಕು. ಮೈ ಇಂಟರಸ್ಟ್ ಈಸ್ ಹೇಲ್‌ಬಾಪ್!'' ಅಂತ ಕೋದಂಡು ಗಡುಸಾಗೆ ಉತ್ತರಿಸಿದ. ಮಾರನೇ ದಿನ ಸಂಜೆ ಬಿಂದೂಗೆ ತಾರಸಿ ಮೇಲೆ ಕೋದಂಡು ಚೀರಿದ ಹಾಗೆ ಕೇಳಿಸ್ತಂತೆ. ಓಡಿ ಹೋಗಿ ನೋಡಿದರೆ ಕೋದಂಡು ಕೈ ಚಪ್ಪಾಳೆ ಹೊಡೀತಾ ""I Sighted! I Sighted!" ಅಂತ ಕುಣೀತಿದ್ದನಂತೆ. ''ಕಾಣಿಸ್ತು ಕಣೆ, ಅಲ್ಲೇ ನೋಡು! ಹೇಲ್ ಬಾಪ್!'' ಅಂತ ಚಂದ್ರುಮನೆ ಸ್ಟೇರ್ ಕೇಸ್ ರೂಮಿನ ಕಡೆ ತೋರಿಸಿದನಂತೆ. ನೋಡಿದರೆ ಅಲ್ಲಿ ಉದ್ದಕ್ಕೆ ಕಾಮೆಟ್ ಕಾಣಿಸ್ತಿತ್ತಂತೆ. ''ಸಧ್ಯ, ಯುರೇಕಾ ಯುರೇಕಾ ಅಂತ ಈ ಪುಣ್ಯಾತ್ಮ ರೋಡಿಗೆ ಇಳೀಲಿಲ್ಲವಲ್ಲ!'' ಅಂತ ಬಿಂದೂ ನಿಟ್ಟುಸಿರು ಬಿಟ್ಟಳಂತೆ. ಇದಾದ ನಂತರ, ಸುಮಾರು ಒಂದು ತಿಂಗಳ ಕಾಲ ಪೇಪರ್ ಪ್ರಕಾರ ಕಾಮೆಟ್‌ನ ನೋಡಬಹುದು ಅಂತ ತಿಳ್ಕೊಂಡು ಕೋದಂಡು ಅದನ್ನು ವೀಕ್ಷಿಸ್ತಾ ಇದ್ದ. ಪ್ರತಿ ದಿನಾ ಆ ಕಾಮೆಟ್ಟೂ ಎಡದಿಂದ ಬಲಕ್ಕೆ ಸ್ವಲ್ಪ ಸ್ವಲ್ಪ ವಾಲಿದ ಹಾಗೆ ತೋರುತ್ತಾ ಕೊನೆ ದಿನ ಸೂರ್ಯ ದಿಕ್ಕಿನ ಕಡೆ ತಿರುಗಿಕೊಂಡಿತಂತೆ. ಗೋಚರವಾಗೋ ಕೊನೇ ದಿನ ನಮ್ಮ ಕೋದಂಡು ಮುಖದಲ್ಲಿ ಸುಖ ಸಂತೃಪ್ತಿ ಕಾಣಿಸಿಕೊಂಡಿತು. ನೋಬೆಲ್ ಪುರಸ್ಕಾರ ಪಡೆದವರ ಕಳೆ ಇತ್ತು ಅವನಲ್ಲಿ. ಇಡ್ಲಿ ಒಡೆ ಒನ್ ಬೈಟೂ ಕಾಫೀ ಜೀವನದಲ್ಲಿ ಕೋದಂಡು ಬಾಹ್ಯಾಕಾಶದ ಪ್ರಪಂಚ ಜ್ಞಾನವನ್ನು ವರ್ಧಿಸಿಕೊಂಡಿದ್ದ......

ಒಂದ್ನಿಮಿಷ ಇರಿ. ಈ ಹಗರಣ ಅಷ್ಟು ಸುಲಭವಾಗಿ ಮುಗಿಯೋ ಹಾಗೆ ಇಲ್ಲ, ಇಲ್ಲೇ ಒಂದು ಓ ಹೆನ್ರಿ ಟ್ವಿಸ್ಟ್ ಕೊಡೋಣ.

ನಮ್ಮ ಕೋದಂಡು ತನ್ನ ಫೈನಲ್ ಅಬ್ಸರ್‌ವೇಶನ್ ಮುಗಿಸೋಕ್ಕೆ ಹತ್ತು ನಿಮಿಷಗಳ ಮುಂಚೆ ಚಂದ್ರು ಬಿಂದೂಗೆ ಫೋನ್ ಮಾಡಿದ. ''ಏನ್ರೀ, ಕೋದಂಡು ಇನ್ನೂ ತಾರಸಿ ಮೇಲೆ ಇದಾನಾ?'' ಅಂತ ಖಚಿತ ಮಾಡ್ಕೊಂಡ. ಬಿಂದು ''ಹ್ಞೂ ಚಂದ್ರು, ಸಧ್ಯ ಸಾಕು

ಇವತ್ತಿಗೆ ಈ ಪಗರಣ. ಸ್ವಿಚ್ ಆಫ್ ಮಾಡ್ಬಿಡಿ'' ಅಂತ ಅಂದಳು. ಚಂದ್ರು, ''ಓಕೆ, ಮಾಡಿದೆ'' ಅಂತ ಕನ್‌ಫರ್ಮ್ ಮಾಡಿದ, ಬಿಂದು ''ಚಂದ್ರು, ನೀವು ತುಂಬಾ ತೊಂದರೆ ತಗೊಂಡ್ರಿ, ತ್ಯಾಂಕ್ಸ್'' ಅಂತ ಕೃತಜ್ಞತೆ ಹೇಳಿದಳು. ಚಂದ್ರು ಸ್ವಲ್ಪ ಮಾಡೆಸ್ಟ್. ''ಇದೇನು ಮಹಾ ಬಿಂದೂ, ತಾರಸಿ ಮೇಲೆ ಒಂದು ಟ್ಯೂಬ್ ಲೈಟ್ ಕಟ್ಟೋದು ಏನು ಕಷ್ಟಾ ಬಿಡಿ'' ಅಂತ ತೇಲಾಯಿಸಿದ.

ಬಿಂದು, ''ಅಯ್ಯೋ ಹಾಗಂದ್ರೇನು? ದಿನಾ ಸ್ವಲ್ಪ ಸ್ವಲ್ಪ ವಾಲಿಸಿ ಕಟ್ಟೋ ಕೆಲಸ ಬೇರೆ ಇತ್ತು ನಿಮಗೆ. ಜೊತೆಗೆ KEB ಪವರ್ ಹೋದಾಗಲೂನೂ ನಿಮ್ಮ ಇನ್‌ವರ್ಟರ್‌ನಿಂದ ಆ ಟ್ಯೂಬ್ ಲೈಟ್‌ನಾ ಆನ್ ಮಾಡೇ ಇರ್ತಿದ್ರಿ. ತೊಂದ್ರೆ ಅಲ್ಲದೆ ಇನ್ನೇನು?'' ಅಂತ ಅಂದಳು. ''ಹೋಗಲಿ ಬಿಡಿ, ಕಷ್ಟ ಪಟ್ಟದ್ದಕ್ಕೆ ಫಲ ಸಿಕ್ತಲ್ಲ! ಕೋದಂಡೂದು ಕಾಮೆಟ್ ಹುಚ್ಚು ಕಳೀತು. ನಿಮಗೂ ಚೆಪ್ಸ್ ಕಾಫೀ ಪುಡಿ ಖರ್ಚು ಉಳೀತು. ಮೋರೋವರ್ ಕೋದಂಡು ನಮ್ಮ ಬೆಡ್‌ರೂಮ್ ಕಡೆ ಸಿಕ್ಕಾಪಟ್ಟೆ ನೋಡೋದೂ ನಿಲ್ತು. ಆಲ್ ಇಸ್ ವೆಲ್ ದಡ್ ಎಂಡ್ಸ್ ಅಪ್ ವೆಲ್!'' ಅಂತ ಚಂದ್ರು ಈ ಹೇಲ್ ಬಾಪ್ ಪಗರಣಕ್ಕೆ ಮುಕ್ತಾಯ ಹಾಡಿದ.



''ಕುಂಬ್ಳೆ ಥರಾ ಬ್ಯಾಟ್ಸ್‌ಮನ್ ಆಗ್ತೀನಿ''



ಗುಜ(ರಿ)ರಾಲ್ ಕುರ್ಚಿ

‘ಆಡಳಿತ ರತ್ನ’

– ಬಿ.ನ. ಸರಪರಿ

ಬೆಳಗ್ಗೆ 10.30 'ಮಾರುತಿ'ಯಿಂದ ಹಾರಿದರು, ತ್ರಿಭುವನ ಸುಂದರಿ ಪ್ರದೇಶ್ ಸರ್ಕಾರದ 'ವೆಟಪೆಪಿ ಬಾಡಿ ಬಿಲ್ಡರ್ಸ್ ನಿಗಮ'ದ ಮ್ಯಾನೇಜ್‌ಮೆಂಟ್ ಜಗದ್ಗುರು ಚತುರರಂಗಪ್ಪನವರು; ವಿದ್ಯುತ್ ಕಣ್ಣುಮುಚ್ಚಾಲೆ ಕಂಡರು. ಮೊದಲು 320 ಮೆಟ್ಟಿಲುಗಳನ್ನು ಸಾವಕಾಶವಾಗಿ, ಕೊನೆಯ 5ನ್ನು ಸರಸರನೆ ಹತ್ತಿ ಅಂತರಿಕ್ಷ ಕಾಂಪ್ಲೆಕ್ಸ್ 21ನೇ ಅಂತಸ್ತಿನ ತಮ್ಮ ಕ್ಯಾಬಿನ್‌ಗೆ ಬಿರ ಬಿರನೆ ಪ್ರವೇಶಿಸುತ್ತ ಪಿ.ಎಸ್.ಗೆ,

''ಇನ್ನು 5 ನಿಮಿಷ 30 ಸೆಕೆಂಡ್ ಯಾರನ್ನೂ ಒಳಗೆ ಕಳಿಸಬೇಡ'' ಎಂದರು.

''ಕಾರ್ಮಿಕ ಸೇನೆಯ ಮುಖಂಡರನ್ನೂ?'' ಎಂದು ಪ್ರಶ್ನಿಸಿ, ನಕ್ಕಳು ಪಿ.ಎಸ್. ಪರಮಸುಂದರಿ.

''ಅವರನ್ನು ತಡೆಯಕ್ಕೆ ನಿನಗೂ ಆಗಲ್ಲ, ನಂಗೂ ಆಗಲ್ಲ'' ಅಂತ ಹೇಳಿ ತಿರುಗುಗಾಲಿ ಕುರ್ಚೀಲಿ ಕೂತರು. ಸ್ವಿಚ್ ಅದುಮಿ ಹೊರಗಿನ ಸೂರ್ಯಚಾಲಿತ ಕೆಂಪು ದೀಪ ಹಚ್ಚಿ ಬಲಗಡೆ ಇದ್ದ ಕಂಪ್ಯೂಟರ್‌ಲಿ ಚೆಸ್ ಆಟ ಶುರು ಮಾಡಿದರು.

20 ಸೆಕೆಂಡ್ ತಡವಾಗಿ ಅವರನ್ನು ಹಿಂಬಾಲಿಸಿ 25ನೇ ಅಂತಸ್ತಿನ ಚೇರ್‌ಮನ್ ಆಫೀಸಿನಿಂದ ಧಡ ಧಡ ಧಾವಿಸಿ ಬಂದರು, ಮಾನವ ಸಂಪನ್ಮೂಲ ವಿಭಾಗದ ಹೆಚ್ಚುವರಿ ನಿರ್ದೇಶಕ ಹುಚ್ಚಪ್ಪ.

''ಇನ್ನು 5 ನಿಮಿಷ ಕಳೆದ ಮೇಲೆ ಭೇಟಿ ಆಗಬಹುದು'' ಎಂದಳು ಪರಮಸುಂದರಿ. ಕಾದು ಮೇಲುಸಿರು ಬಿಡುತ್ತ ಮೊರೆ ಹೊಕ್ಕ ಹುಚ್ಚಪ್ಪನವರಿಗೆ ಎಡಕಿವಿ ಮಾತ್ರ ಕೊಟ್ಟು ಕೇಳಿದರು, ರಂಗಪ್ಪ ಆಟ ಮುಂದುವರಿಸುತ್ತ.

''ಹುಚ್ಚಪ್ಪ, ಏನ್ಸಮಾಚಾರ?''

''ಸಾರ್! ಫ್ಯಾಕ್ಟರಿಯಿಂದ ಸಂದೇಶ ಬಂತು, ಪೇಜರ್‌ನಲ್ಲಿ ಹೆಚ್ಚುವರಿ ಜಿ.ಎಂ. ನಂ.5 ಜಂಬಣ್ಣನ್ನ ನಾಳೆ ಸಂಜೆ 5ಕ್ಕೆ ಮುಂಚೆ ವರ್ಗ ಮಾಡದೆ ಇದ್ದರೆ ಕಂಪ್ಯೂಟರ್‌ಗಳನ್ನು 'ಡೌನ್' ಮಾಡ್ತೀವಿ ಅಂತಾರೆ, ಕಂಪ್ಯೂಟರ್ ವಿಭಾಗದವರು''

''ಕಾರಣ?''

''ಜಂಬಣ್ಣನವರ ಕ್ವಾಲಿಫಿಕೇಶನ್ ಸಾದಾ ಡಿಗ್ರಿ, ಇನ್ ಬಿಸಿನೆಸ್‌ವ್ಯಾಲ್ ಅಡ್ಮಿನಿಸ್ಟ್ರೇಷನ್. ಕಂಪ್ಯೂಟರ್ ಅರಿವಿಲ್ಲ. ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಸಿಕ್ತಿಲ್ಲ. ಯೋಚಿಸಿ ನೋಡಿ ನಿಮಗೇ ಗೊತ್ತಾಗತ್ತೆ ಎಂದು ಜಾರಿಕೊಳ್ತಾರೆ. ಅಂತ ದೂರಿದ್ದಾರೆ ಕಂಪ್ಯೂಟರ್ ಕಿಲಾಡಿಗಳು.''

''ಹಾಗೆ ಹಠ ಹಿಡಿದ್ರೆ ನಮಗೆ ಈ ತಿಂಗಳ ಸಂಬಳ ತಡವಾಗುತ್ತಲ್ಲಪ್ಪ; ಚೇರ್‌ಮನ್ ಏನಂತಾರೆ?''

''ರಂಗಪ್ಪೊರ್ನ ಕಾಣಿ ಅಂದ್ರು''

''ಜಂಬಣ್ಣಂಗೆ ಬಾಕಿ ಸರ್ವಿಸ್ ಎಷ್ಟಿದೆ? ಸೀಟಲ್ಲಿ ಸದಾ ನಿದ್ರೆ ಮಾಡ್ತಾರಂತೆ. ಅವರ 'ಬ್ಲಡ್‌ಗ್ರೂಪ್' ಯಾವುದು?''

''ಕಂಪ್ನಿ ಪೆಥಾಲಜಿಸ್ಟ್ ಪಂಚಾಕ್ಷರಪ್ಪನೋರ ರಿಪೋರ್ಟ್ ತರಿಸಿ ಕೇಳಿದ್ವಿ. ಅವರಂದ್ರು, ನಮ್ಮ ಲ್ಯಾಬ್‌ನಲ್ಲಿ ಗೊತ್ತಿರೋದೆ ಐದಕ್ಷರ. ಎ, ಎಪ್ಲಸ್, ಬಿ, ಬೀಪ್ಲಸ್, ಓ. ಅವುಗಳ ಸರದಿ ಪ್ರಕಾರ ರಿಪೋರ್ಟ್‌ನಲ್ಲಿ ತುಂಬ್ತಾರೆ, ನಮ್ಮ ಹುಡುಗರು. ಇವರದು ಸರ್ಕಾರಿ ರಕ್ತ. ಯಾವ ವರ್ಗಕ್ಕೂ ಒಗ್ಗಲ್ಲ, ಬಗ್ಗಲ್ಲ.''

''ಸ್ವಯಂ ನಿವೃತ್ತಿಗೆ ಒಪ್ತಾರಾ ಕೇಳಿ. ಎಲ್ಲ ರಿಟೈರ್‌ಮೆಂಟ್ ಬೆನಿಫಿಟ್ ಕೊಡೋಣ। ಕಂಪ್ನಿ ನಷ್ಟ ಕಡಿಮೆ ಆಗತ್ತೆ.''

''ಸೂಕ್ಷ್ಮವಾಗಿ ವಿಚಾರಿಸಿದ್ವಿ. ಒಪ್ಕೊಳ್ಳೊ ಹಾಗೆ ಕಾಣ್ಲಿಲ್ಲ. ಸೀನಿಯಾರಿಟಿ ಪ್ರಕಾರ ಅವರು ಡೈರೆಕ್ಟರ್ ಆಗಬೇಕಂತೆ.''

''ಬೇಷ್! ಚೆನ್ನಾಯ್ತು! ಒತ್ತಾಯ ಸಾಧ್ಯವಿಲ್ಲ. ಅವರು ಯುವಜನ ಖಾತೆ ಮಂತ್ರಿ ಮರಿಮಗ. ಕಂಪ್ನೀಲಿ 30 ವರ್ಷ ಸಾಕಿದಾರೆ. ಎಲ್ಲ ಕಡೆ ನಿದ್ರೆಮಾಡಿ ಮೇಲೆದ್ದಿದಾರೆ. ವೇಕೆನ್ಸಿ ಎಲ್ಲೆಲ್ಲಿದೆ?''

''ಹೆಚ್ಚುವರಿ ಸೇಲ್ಸ್ ನಿರ್ದೇಶಕರ ಹುದ್ದೆ ಕಂಪ್ನಿ ಕಾರ್ಪೆಟ್ ಆಫೀಸ್‌ಲಿ''

''ಅಲ್ಲಿಗೆ ಹಾಕಿದರೆ ಹೆಚ್ಚುವರಿ ಹಣದ ಕಮಿಟ್‌ಮೆಂಟ್ ಇದೆಯಾ?''

''ಇಲ್ಲ ಮನೆ ಆಫೀಸ್ ದೂರ 200 ಮೀಟರ್ ಒಳಗೇ ಇರೋದ್ರಿಂದ ಕಂಪ್ನಿಕಾರ್ ಪೆಟ್ರೋಲ್ ಉಳಿಯುತ್ತೆ.''

''ವಿದ್ಯುತ್ ಕಡಿತ ವಾಸಿ ಆಗಲ್ಲ, ಈ ವರ್ಷಕ್ಕೇ ಆರ್ಡರ್ಸ್ ಇಲ್ಲ. ಸದ್ಯದಲ್ಲೆ ಕಂಪ್ನೀನ ಚೆನ್ನೈ, ಮುಂಬೈ ಸೇಠ್‌ಗಳಿಗೆ ಮಾರೋದು ಖಂಡಿತ. ಹೀಗ್ಮಾಡಿ. 'ಬಡ್ತಿಹಣ ಕಂಪ್ನಿ ಠೇವಣೀಲಿ ಇಡಬೇಕು; ದೇಶ ವಿದೇಶಗಳಲ್ಲಿ ಬ್ರಾಂಚ್ ಇರೋದ್ರಿಂದ ಪ್ರವಾಸಕ್ಕೆ ಬೋರ್ಡ್ ಒಪ್ಪಿಗೆ ಬೇಕು; 10ನೇ ಪೇ ಕಮೀಷನ್ ವರದಿ ಬಂದ್ಮೇಲೆ ಸಂಬಳ, ಕಾರ್ ಭತ್ಯ ಹೆಚ್ಚಿಸುವ ಸಾಧ್ಯತೆ ಇದೆ' ಇತ್ಯಾದಿ ಇತ್ಯಾದಿ ಷರತ್ತು ಹಾಕಿ ಬಡ್ತಿ ಕೊಡೋಣ.''

''ಆ ವಿಭಾಗದ ಗತಿ, ಸಾರ್!''

''ಸೆಂಟ್ರಲ್ ಎಕ್ಸೈಸ್, ಸೇಲ್ಸ್ ಟ್ಯಾಕ್ಸ್, ಆಮದು-ರಫ್ತು ಲೈಸೆನ್ಸ ರೂಲ್ಸ್, ಲಾರಿ-ರೈಲು ಪರ್ಮಿಟ್ ವಗೈರೆ ವಗೈರೆಗಳಲ್ಲಿ ಅವರನ್ನೂ ನಿದ್ರೆಯಿಂದ ಎಬ್ಬಿಸಿ ತಲೆ ತಿಂತಾರೆ, ಆ ಮಾರ್ಕೆಟಿಂಗ್ ಕ್ಲಾರ್ಕ್‌ಗಳು. ಆಗ ನಿವೃತ್ತಿ ಬೇಕು ಅಂತಾರೆ.''

'ಅವರಿಗೆ ಕ್ಯಾಬಿನ್ ಎಲ್ಲಿ ಕೊಡೋಣ ಸಾರ್!''

''ಮೆಟ್ಟಲು ಪಕ್ಕದಲ್ಲಿ, ಚೇರ್‌ಮನ್ ಆಫೀಸ್ ಸಮೀಪ. ಸದ್ಯಕ್ಕೆ ಬಾಗಿಲು ಅಟೆಂಡರ್ ಬೇಡ. ಲೋಕಲ್ ಟೆಲಿಫೋನ್, ಪಿ.ಎ. ಮಾತ್ರ ಕೊಡಿ. ನಿಮ್ಮ ಪಿ.ಎ. ಕೈಲಿ ಆರ್ಡರ್ ಡ್ರಾಫ್ಟ್ ಮಾಡಿಸಿ; ಫೈಲ್ ತಕ್ಷಣ ತನ್ನಿ; ಶಿಫಾರಸ್ ಮಾಡ್ತೀನಿ ಇಂಥವರನ್ನು ಮೇಲಕ್ಕೆ ಎತ್ತಿ

ಒಗೀಬೇಕು, ಆಡಳಿತ ಅಪಾಂತರದ ಆಟಗಳ ಕೈಪಿಡಿ ಸೂತ್ರಗಳ ಪ್ರಕಾರ. ನಿಮ್ಮ ಸಮಸ್ಯೆಗೆ ಹೇಗಿದೆ ಪರಿಹಾರ?''


''ಸೊಗಸಾಗಿದೆ ಸಾರ್!'' ಎಂದು ಕಷ್ಟಪಟ್ಟು ನಕ್ಕು ಹೊರಬಂದ ಹುಚ್ಚಪ್ಪ, ''ಆ ಚೇರ್‌ಮನ್, ಈ ಚದುರಂಗಪ್ಪನ ಆಟಗಳಲ್ಲಿ ನಾವು ಕಾಲಾಳುಗಳು; ಈ ಸಾರ್ತಿ 'ಆಡಳಿತ ರತ್ನ' ಪ್ರಶಸ್ತಿ ಇವರಿಗೇ ಘೀಸಲು'' ಎಂದು ಹುಚ್ಚಾಪಟ್ಟೆ ಗೊಣಗುತ್ತ ಪಿ.ಎ. ಪರಮ ಆಪ್ತನ್‌ನ ಹುಡುಕುತ್ತ ಹೊರಟರು, ಕೊಠಡಿಯಿಂದ ಕೊಠಡಿಗೆ.

ಕನ್‌ಸಲ್ಟೆನ್ಸಿ ಬಿಲ್ ತೆಗೀತ ಪರಮಸುಂದರಿ ನಗುತ್ತ ಹಾಡಿದಳು, ''ಸಂಜೆ ಸೈರನ್ ಕೂಗಕ್ಕೆ ಮುಂಚೆ ಅವನನ್ನು ಹುಡುಕಿದರೆ ನಿಮಗೆ ಫಾರಿನ್ ಟ್ರೈನಿಂಗ್‌ಗೆ ಶಿಫಾರಸ್ ಮಾಡಿಸ್ತೀನಿ.''

ಕೊರವಂಜಿಯಿಂದ



''ಎರಡು ಗಜ ಆದ್ರೆ ಬೇಕಾದಷ್ಟಾಯ್ತು ಅಂದ್ರಿ!''



LOCUSTS STAND I

- ಶಿವು

ಕಳೆದ ಮೂರು ವಾರಗಳು ಹೆಕ್ಟಿಕ್ ಆಗಿದ್ದವು. ಯುಗಾದಿ ಸಂಚಿಕೆಯ ತಯಾರಿ ಎಂದಿಗೂ ತರಾತುರಿಯ ಕೆಲಸವೇ. ಈ ಬಾರಿ ನೂರ ಅರವತ್ತು ಪುಟಗಳು ಬೇರೆ. ಜಾಹಿರಾತುಗಳಿಗಾಗಿ ಓಡಾಟ, ಒಮೆಗಾದ ರವಿಯನ್ನು ಗೋಳಾಡಿಸಿ, ಕಂಪ್ಯೂಟರ್ ಪರದೆಯ ಮೇಲೆಯೇ ಲೇಔಟ್ ಮಾಡಿಸಿ, ಸಮಯ ಉಳಿಸುವ ವಿಫಲ ಯತ್ನ, ಕರಡು ತಿದ್ದುವಿಕೆ, ಇವೆಲ್ಲ ಕೆಲಸಗಳು, ದಿನಗಳನ್ನು ತುಂಬಿ ತುಳುಕಿಸಿದ್ದವು. ಕರಡು ತಿದ್ದುವಿಕೆ!

- ಅಬ್ಬ, ನನ್ನ ಶತ್ರುವಿಗೂ ಬೇಡ ಈ ಕೆಲಸ. ಡಿ.ಟಿ.ಪಿ.ಯ ಕರಡು ಪ್ರತಿಯನ್ನು ತಿದ್ದುವಾಗ ಒಂದು ವಿಚಿತ್ರ ಸಮಸ್ಯೆ ಇದಿರಾಗುತ್ತದೆ. ಕರಡು ಪ್ರತಿ ಅಚ್ಚುಕಟ್ಟಾಗಿ ಮುದ್ರಿತವಾಗಿರುವುದರಿಂದ, ಅದರಲ್ಲಿ ತಪ್ಪೇ ಇಲ್ಲವೆಂಬ ಭ್ರಾಂತಿ ಮನಸ್ಸನ್ನು ಆವರಿಸುತ್ತದೆ. ಮುದ್ರಾರಾಕ್ಷಸನ ಹಾವಳಿ ಕಣ್ಣಿಗೆ ಬೀಳಬೇಕಾದರೆ, ಕಣ್ಣಲ್ಲಿ ಕಣ್ಣಿಟ್ಟು ಬಾಲಬೋಧೆ ಓದುವಂತೆ ಅಕ್ಷರಗಳನ್ನು ಕೂಡಿಸಿಕೊಂಡು ಓದಬೇಕು. ಈ ಮಧ್ಯೆ ಧಾರವಾಡದ ಭಾಷೆಯನ್ನು ಬಳಸುವ ಶೀನೂ, ಶರಣ್ ಅಂಥವರ ಲೇಖನ ಸಿಕ್ಕಿದರಂತೂ ಮುಗಿಯಿತು. ಈ ಧಾರವಾಡದ ಮಂದಿಗೆ ಕ ಮತ್ತು ತ ಇವುಗಳ ನಡುವೆ ಇರುವ ವ್ಯತ್ಯಾಸವೇ ತಿಳಿಯದು. ಅಲ್ಲದೇ ಈ ಜನ ತೀರಾ ಸೆನ್ಸಿಟಿವ್. ಒಂದೊಂದು ಮುದ್ರಣ ದೋಷವನ್ನೂ ತಮ್ಮನ್ನು ಕುರಿತು ಬೇಕೆಂದೇ ಮಾಡಿದ ಪರ್ಸನಲ್ ಇನ್‌ಸಲ್ಟ್ ಎಂದು ಈ ಮಂದಿ ಪರಿಗಣಿಸುವುದರಿಂದ, ಬಹು ಕಾಲದಿಂದ ಬೆಳೆಸಿಕೊಂಡು ಬಂದ ಸ್ನೇಹ, ಕೇವಲ ಒಂದು ಕ ಅಥವಾ ತ ಕ್ಕಾಗಿ ಎಂದು ಮುರಿದು ಬೀಳುವುದೋ ಎಂಬ ತೀವ್ರ ಭಯ, ಕರಡು ತಿದ್ದುಗನನ್ನು ಸದಾ ಕಾಡುತ್ತಿರುತ್ತದೆ. ಅಂತೂ ಕೊನೆಗೆ ಇದೆಲ್ಲಾ ಮುಗಿದು 'ಹುಶ್ಯಪ್ಪ' ಅನ್ನುವುದರೊಳಗಾಗಿ ನನ್ನ ಮಗಳ ಪ್ರಯಾಣಕ್ಕಾಗಿ ಬೆಂಗಳೂರು ಮದ್ರಾಸುಗಳ ನಡುವೆ ಪರದಾಡಬೇಕಾಯಿತು. ಪ್ರಯಾಣದ ಸಿದ್ಧತೆ ಎಲ್ಲಾ ಮುಗಿದ ನಂತರ ಒಂದು ಸಂಜೆ "We deserve a break" ಎಂದು ನಮಗೆ ನಾವೇ ಹೇಳಿಕೊಂಡು ನಾನೂ, ನನ್ನ ಮಗಳೂ, ಶಾನುಭಾಗರ ಪ್ರೀಮಿಯರ್ ಬುಕ್ ಷಾಪ್‌ಗೆ ಹೋದೆವು. ಅಲ್ಲಿ ಮುಂದಿನ ಸಾಲಿನಲ್ಲೇ ಇಟ್ಟಿದ್ದ "The God of small Things" ಕಣ್ಣಿಗೆ ಬಿತ್ತು. ಟಿ.ವಿ. ಮತ್ತು ವಾರಪತ್ರಿಕೆಗಳಲ್ಲಿ ಕಳೆದ ಹಲವು ವಾರಗಳಿಂದ ಅರುಂಧತಿ ರಾಯ್‌ಳ ಈ ಕಾದಂಬರಿಯ ಹೆಸರು ಮಿಂಚುತ್ತಿದ್ದುದು ನಮ್ಮ ಕುತೂಹಲವನ್ನು ಕೆರಳಿಸಿತ್ತು. ''ಸರಿ, ಮಾಡುಕ್ಕೆ ಕೆಲಸವಿಲ್ಲ. ಮನೇಲೇ ಒಂದು ರಾಶಿ ಬಿದ್ದಿದೆ ಪುಸ್ತಕ'' ಅಂತ ನಮ್ಮ ಉತ್ಸಾಹದ ಮೇಲೆ ತಣ್ಣೀರೆರೆಚಲು ನನ್ನ ಹೆಂಡತಿ ಜೊತೆಯಲ್ಲಿ ಇರಲಿಲ್ಲ, ಧೈರ್ಯಮಾಡಿ ಹತ್ತು ಪರ್ಸೆಂಟ್ ಡಿಸ್ಕೌಂಟ್ ಪಡೆದು ಪುಸ್ತಕವನ್ನು ಮನೆಗೆ ತಂದೇ ಬಿಟ್ಟೆವು.

ನಿಮಗೆ ಹೇಗೋ ತಿಳಿಯದು. ನನಗಂತೂ, ಕುರ್ಚಿಯಮೇಲೆ ಕಾಲುಮುದುರಿ

ಕೂತು, ಒಂದು ಒಳ್ಳೇ ಕಾದಂಬರಿಯನ್ನು ಕೈಯಲ್ಲಿ ಹಿಡಿದಾಗ, ಯಾವುದೋ ಒಂದು ಹೊಸ ಲೋಕಕ್ಕೆ ಯಾತ್ರೆ ಹೊರಡುವ ಮುಂಚಿನ ಸಂಭ್ರಮ ಸಡಗರ ಮೂಡುತ್ತದೆ. ಹಿಂದೆ ಚಿಕ್ಕಂದಿನಲ್ಲಿ ಕಾರಂತರ ಕಾದಂಬರಿಗಳನ್ನು ಹೀಗೆ ಕದ್ದು ಓದುತ್ತಿದ್ದುದುಂಟು. (ರಾಜಾರೋಷವಾಗಿ ಕಾದಂಬರಿ ಓದುಕ್ಕಾಗುತ್ತಿತ್ತೇ ಆ ಕಾಲದಲ್ಲಿ? ಓದುವುದೇ ಕಮ್ಮಿ. ಓದುವುದಾದರೆ ಪಾಠ ಓದಲಿ ಎಂದು ತಾಯಿ ತಂದೆಯರು ಹಂಬಲಿಸುತ್ತಿದ್ದ ಕಾಲವದು) ಕಾರಂತರ 'ಚಿಗುರಿದ ಕನಸು' ಓದಿ ಮುಗಿಸುವಾಗ ಕೊನೆಯಲ್ಲಿ ಶಂಕರ ವರಲಕ್ಷ್ಮಿಯನ್ನು ತನ್ನ ಮಡದಿಯನ್ನಾಗಿ ಮಾಡಿಕೊಂಡು, ಬಂಗಾಡಿಗೆ ಕರೆತಂದಾಗ ನಾನೇ ವರಲಕ್ಷ್ಮಿಯನ್ನು ಮದುವೆಯಾದಂತೆ ಭಾವಿಸಿ ಪುಳಕಗೊಂಡಿದ್ದೆ. (ಮದುವೆ-ಪುಳಕ! - ಎಂತಹ ಮುಗ್ಧತೆ!) ಔದಾರ್ಯದ ಉರುಳನ್ನು ಓದುವಾಗಲಂತೂ, ಕಾರಂತರು ಸೃಷ್ಟಿಸಿದ ಉಕ್ಕಿ ಹರಿಯುವ ಅಬ್ಬಿ, ಹಚ್ಚ ಹಸಿರಿಸಿ ಹೊದಿಕೆಯ ಬೆಟ್ಟಗಳು, ತಿಳಿ ಹಸಿರಿನ ಗದ್ದೆಗಳು ಇವುಗಳ ನಾಡಿನಲ್ಲಿ ಸ್ವೇಚ್ಛೆಯಿಂದ ತಿರುಗಾಡಿ, ಅಮ್ಮ ಊಟಕ್ಕೆ ಕರೆದಾಗ ಮನಸ್ಸಿಲ್ಲದ ಮನಸ್ಸಿನಿಂದ ಪುಸ್ತಕ ಮುಚ್ಚಿಡುತ್ತಿದ್ದುದು ಇನ್ನೂ ನೆನಪಿನಲ್ಲಿದೆ. ಅರುಂಧತಿಯ "The God of small Things" ಓದಿ ಮುಗಿಸಿದ ನಂತರ, ಬೇಸಿಗೆ ಮಧ್ಯಾಹ್ನ ತಣ್ಣನೆಯ ಷವರಿನಲ್ಲಿ, ಹಿಂದೆಗೆಯುತ್ತಲೇ ನುಗ್ಗಿ, ಮಿಂದು ಹೊರಬರುವಾಗಿನ ಉಲ್ಲಾಸಕರ ಬೆಚ್ಚನೆಯ ಅನುಭವ ನನ್ನದಾಗಿತ್ತು.

ಹೆದರಬೇಡಿ. ಖಂಡಿತ ಇಲ್ಲಿ ಕಾದಂಬರಿಯ ಕಥೆಯನ್ನು ಹೇಳುವ ಉದ್ದೇಶವೇನೂ ಇಲ್ಲ. ಅದಲ್ಲದೇ ಈ ಕಾದಂಬರಿಯಲ್ಲಿ ಹೇಳುವಂತಹ ಕಥೆಯೇನೂ ಇಲ್ಲ. ಏನಿದ್ದರೂ ಒಂದು ತಾಣದ, ಒಂದು ಕಾಲದ ಚರಿತ್ರೆಯನ್ನು, ಒಂದು ಮಗುವಿನ ತೀಕ್ಷ್ಣ ಸಂವೇದನೆಯ ನೆರವಿನಿಂದ ಗುರುತಿಸುವುದೇ ಈ ಕಾದಂಬರಿಯ ಜೀವಾಳ.

ಆಯಮೆನಂ ಕೇರಳದ ಒಂದು ಹಳ್ಳಿ. ಆ ಹಳ್ಳಿಯಲ್ಲಿ ಗುಡ್ಡದಮೇಲೆ ಒಂದು ಹಳೆಯ ಕಾಲದ ಮನೆ. ಲೇಖಕಿ ಇದನ್ನು ವರ್ಣಿಸುತ್ತಾ ಹೀಗೆನ್ನುತ್ತಾಳೆ.

It was raining when Rahel came back to Ayemenem. Slanting silver ropes slammed into loose earth ploughing it up like gun fire. The old house on the hill wore its steep gabled roof pulled over its ears like a low hat. The walls, streaked with moss had grown soft and bulged a little with dampness that seeped up form the ground. The wild over grown garden was full of the whisper and scurry of small lives....

ಈ ಹಳ್ಳಿಯಲ್ಲಿ ಒಂದು ಹಳೆಯ ಕಾಲದ ಅರಮನೆ. ಹಿಂದೆ, ಬಹು ಹಿಂದೆ ಬ್ರಿಟಿಷ್ ಪ್ಲಾಂಟೇಷನ್ ಮಾಲೀಕನೊಬ್ಬ ವಾಸಿಸುತ್ತಿದ್ದ ಮನೆ ಇದು. ಈಚೆಗೆ ಇದು ಒಂದು ತಾರಾ ಹೋಟೆಲಾಗಿ ಬದಲಾಗಿದೆ. ಈ ಹೋಟೆಲಿನ ಅತಿಥಿಗಳಿಗೆ ಕೇರಳದ ಸಂಸ್ಕೃತಿಯ

ಪರಿಚಯವಾಗಬೇಕಲ್ಲ. ಇದಕ್ಕಾಗಿ ಪ್ರವಾಸಿ ಇಲಾಖೆಯವರು ಒಂದು Pool - side ಕಥಕ್ಕಳಿ ನೃತ್ಯವನ್ನು ಏರ್ಪಡಿಸಿರುತ್ತಾರೆ. ಕೇವಲ ಅರ್ಧಘಂಟೆಯ ಕಾರ್ಯಕ್ರಮವದು. ಇಡೀ ರಾತ್ರಿ ನಡೆಯುವ ಕರ್ಣ ಶಪಥವನ್ನಾಗಲೀ, ದ್ರೌಪದಿ ವಸ್ತ್ರಾಪಹರಣವನ್ನಾಗಲೀ, ಅರ್ಧಘಂಟೆಯಲ್ಲಿ ಅದಿ ತೋರಿಸಲು ಸಾಧ್ಯವೇ. ಆದರೂ ಹೊಟ್ಟೆ ಪಾಡಿಗೋಸ್ಕರ ಈ ಕಥಕ್ಕಳಿ ನಟರು ಅರ್ಧ ಘಂಟೆಯಲ್ಲಿ ಹೇಗೋ ಕಾರ್ಯಕ್ರಮ ಮುಗಿಸಿ, ತಮ್ಮ ಕಲೆಗೆ ಆದ ಅಪಚಾರಕ್ಕೆ ಪ್ರಾಯಶ್ಚಿತ ರೂಪವಾಗಿ ಅಯಮೆನಂ ನ ದೇವಸ್ಥಾನಕ್ಕೆ ಬಂದು ದೇವರ ಮುಂದೆ ಇಡೀ ರಾತ್ರಿ ಕುಣಿದು, ದೇವರಲ್ಲಿ ಕ್ಷಮೆಯಾಚಿಸುತ್ತಾರೆ.

ದೇವಸ್ಥಾನದಲ್ಲಿ ಇಂತಹ ಒಂದು ಕಥಕ್ಕಳಿ ನೃತ್ಯ ನಡೆದಿರುವಾಗ ಮೂಕ ಪ್ರೇಕ್ಷಕಿಯಾಗಿ ಕಥಾನಾಯಕಿ ರಹೇಲ್ ಬರುತ್ತಾಳೆ. ಅವಳು ಬರುವ ಹೊತ್ತಿಗಾಗಲೇ ಕರ್ಣ ಶಪಥಂ ಪ್ರಾರಂಭವಾಗಿರುತ್ತದೆ. It din't matter that the story had begun because kathakkali discovered long ago that the secret of the great stories is that they have no secrets. The Great Stories are the ones you have heard and want to hear again. The ones you can enter any where and inhabit comfortably. They don't deceive you with thrills & trick endings. They don't surprise you with the unforeseen. They are as familier as the home you live in or the smell of your lover's skin. You know how they end, yet you listen as though you don't. In the way that although you know that one day you will die you live as thought you won't. In the great stories you know who lives who dies who finds love who doesn't. And yet you want to know again.

That is their mysrery and their magic.

ಈ ಕಾದಂಬರಿಯಲ್ಲಿಯೂ ಸಹಾ ಲೇಖಕಿ ಇದೇ ತಂತ್ರವನ್ನು ಬಳಸಿದ್ದಾಳೆ. ಮೊದಲನೇ ಅಧ್ಯಾಯದಲ್ಲೇ ಇಡೀ ಕಾದಂಬರಿಯಲ್ಲಿ ಮುಂದೆ ನಡೆಯುವ ಘಟನೆಗಳನ್ನೆಲ್ಲಾ ಓದುಗನಿಗೆ ತಿಳಿಯುತ್ತದೆ. ಮುಂದಿನ ಎಲ್ಲ ಅಧ್ಯಾಯಗಳಲ್ಲಿ ಈ ಘಟನಾವಳಿಗಳು ಕ್ರಮೇಣ ವಿವರವಾಗಿ ಬಿರಿದುಗೊಳ್ಳುವ ಶೈಲಿ ನಿಜಕ್ಕೂ ತೀವ್ರವಾಗಿ ಗಮನ ಸೆಳೆಯುವ ಸಂಗತಿ.

ಈ ಕಾದಂಬರಿ ಓದಿದ ಮೇಲೆ, ಕಥೆಯನ್ನು ಹೇಳದೆಯೇ (ಅದರ ಅಗತ್ಯವೂ ಇಲ್ಲ ಎನ್ನಿ) ಭಾವೀ ಓದುಗರಿಗೆ, ಇದರ ಬಗ್ಗೆ ಏನು ಹೇಳಬಹುದು ಎಂದು ಯೋಚಿಸಿದೆ.

ಸುತ್ತಲಿನ ನಿಸರ್ಗವನ್ನು ಅತ್ಯಂತ ಮನೋಜ್ಞವಾಗಿ ದಾಖಲಿಸಬಲ್ಲ ಕಾರಂತ ಸಮಾನ ಕಣ್ನೋಟ, ಎ.ಕೆ. ರಾಮಾನುಜಂ ಶೈಲಿಯನ್ನು ನೆನಪಿಸುವ ತುಂಟತನದ ಆಹ್ಲಾದಕರ ಪದಪ್ರಯೋಗ, ದೇವನೂರು ಮಹದೇವರ ಸುಡು ಸಂವೇದನೆ, ತೀವ್ರ


ಅನುಭವದ ಕುಲುಮೆಯಲ್ಲಿ ಕಾಸಿ, ಭಾಷಾ ಪ್ರೌಢಿಮೆಯ ಸುತ್ತಿಗೆಯ ಪ್ರಹಾರದಿಂದ ಪದಗಳಿಗೆ ಹೊಸ ಅರ್ಥ, ಹೊಸ ಹೊಳಪನ್ನು ಹೊಂದಿಸುವ ಕಲಾವಂತಿಕೆ, - ಅರುಂಧತಿಯವರ ಈ ಮೊದಲ ಕಾದಂಬರಿ ಈ ಎಲ್ಲ ಅನುಭವಗಳನ್ನು ಬಹು ಸರಳವಾಗಿ ಓದುಗನಿಗೆ ಪರಿಚಯಿಸುತ್ತದೆ ಅನ್ನಿಸಿತು.

ಮೊನ್ನೆ ಪ್ರಭು ಬಂದಿದ್ದರು. ಪುಸ್ತಕ ಪರಿಚಯ ಮಾಡಿಸುವುದಾದರೆ, ಅಪರಂಜಿ ಇಡಿಯಂನಲ್ಲಿ ಮಾಡಿ ಎಂದು ಹೇಳಿದರು. ಅಪರಂಜಿ ಇಡಿಯಂ ನಿಜವಾಗಿ ಯಾವ ಸ್ವರೂಪದ್ದು ಎಂದು ನಾವೆಲ್ಲಾರೂ ತಡಕಾಡುತ್ತಿದ್ದೇವೆ. ಅರುಂಧತಿ ಹೇಳುವ ಹಾಗೆ ನನ್ನ ಈ ತಡಕಾಟವೇ ನನಗೆ Locusts Stand I!

"The God of small Things'- Arundhati Roy. 340 pages.

Publisher: India Ink,

Year of Publication - 1997



ತಾಳಿದವನು ಬಾಳಿಯಾನೆ?

ಎಂ.ಎಸ್.ಕೆ.

ತಾಳಿದವನು ಬಾಳಿಯಾನು ಎಂದು ಮೊದಲು ಯಾರು ಹೇಳಿದರೋ ಅವರಿಗೆ ಸಾಕಷ್ಟು ಅನುಭವ ಇರಲಿಲ್ಲ ಅಂತ ಹೇಳಲೇಬೇಕಾಗುತ್ತದೆ. ಈ ಗಾದೆ ಹಿಂದೆ, ಇವತ್ತು ಮತ್ತು ನಾಳೆ ಈ ತ್ರಿಕಾಲಗಳಲ್ಲಿ ಯಾವಾಗಲೂ ಎಂದೂ ಸರಿಯಾಗಿ ಅನ್ವಯಿಸುವುದಿಲ್ಲ ಎಂಬುದು ಖಂಡಿತ.

ದ್ವಾಪರದಲ್ಲಿ ನಮ್ಮ ಧರ್ಮರಾಯನು ಜೂಜಾಡಿ ತನ್ನ ಸರ್ವಸ್ವವನ್ನೂ ಕಳೆದುಕೊಂಡು ತದನಂತರ ತನ್ನ ಹೆಂಡತಿ ಮತ್ತು ತಮ್ಮಂದಿರಿಗೆ ಸಹನೆ, ತಾಳ್ಮೆ, ಶಾಂತಿ ಬೋಧಿಸಲು ಹೋದಾಗ ಅವನಿಗೆ ಆದ ನ್ಯಾಗಿಂಗ್ ಗದ್ಯ ಮತ್ತು ಕಾವ್ಯ ರೂಪದಲ್ಲಿ ಹರಿದು ಬಂದಿದೆ. ತಮ್ಮಂದಿರಿಗೆ ತಕ್ಷಣ ಯುದ್ಧಮಾಡಿ ತಮ್ಮ ರಾಜ್ಯವನ್ನು ಪುನಃ ಗೆದ್ದುಕೊಳ್ಳಬೇಕೆಂಬ ಛಲ. ಆ ಹಿರಿಯಣ್ಣನಿಗೆ ಈ ತಾಳಿದವನು ಬಾಳಿಯಾನು ಗಾದೇ ಮೇಲೆ ಅಚಲ ನಂಬಿಕೆ. ಅದರಿಂದಲೇ ಅವನು ಆ ಹನ್ನೆರಡು ಪ್ಲಸ್ ಎರಡು ವರುಷಗಳು ತನ್ನ ತಮ್ಮಂದಿರು ಮತ್ತು ಹೆಂಡತಿ ಇಂದ ಸತತ ನ್ಯಾಗ್ ಮಾಡಿಸಿಕೊಳ್ಳ ಬೇಕಾಯಿತು. ಜೊತೆಗೆ ''ಇವನೊಬ್ಬ ಹೇಡಿ. ಅಂಜುಬುರುಕ'' ಎಂಬ ಬಿರದೂ ಸೇರಿಕೊಂಡಿತು. ಆ ಧರ್ಮ ಶ್ರೇಷ್ಠನು ನಮ್ಮ ಇಂದಿನ ಕಲಿಯುಗದ ಪುಢಾರಿಗಳಂತೆ ''ಹಾಂ. ಹೀಗೆ ಮಾಡಿಬಿಡೋಣ. ಹಾಗೆ ಮಾಡಿಬಿಡೋಣ. ಜೈಲ್ ಭರೋ, ರಾಸ್ತಾ ರೋಕೋ, ಹಸ್ತಿನಾವತಿ, ಇಂದ್ರಪ್ರಸ್ತ ಇವೆಲ್ಲ 24 ಘಂಟೆ ಬಂದ್ ಮಾಡಿಬಿಡೋಣ'' ಅಂತೆಲ್ಲಾ ಕೂಗಾಡಿ ಕೊನೆಗೆ ''ನೋ ಆಕ್ಷನ್-ಟಾಕ್ ಓನ್ಲಿ'' ಥರ ಕಾಡಿಗೆ ಹೋಗಿದ್ದರೆ ಈ ರ್‍ಯಾಗಿಂಗ್-ನ್ಯಾಗಿಂಗ್ ಎಲ್ಲಾ ತಪ್ಪುತ್ತಿತ್ತು. ಆದರೆ ಅವನಿಗೆ ಈ ಕಲಿಯುಗದ ರಾಜಕೀಯ ಗೊತ್ತಿರಲಿಲ್ಲ. ಅವನೇಕೆ, ಅವನ ಗುರುಗಳಾದ ಆಚಾರ್ಯ ದ್ರೋಣರಿಗೇ ಗೊತ್ತಿರಲಿಲ್ಲ. ಅವರಿಗೂ ಕಲಿಯುಗಕ್ಕೂ ಕನಿಷ್ಟ 5000 ವರುಷ ಅಂತರವಿತ್ತಲ್ಲಾ!.

ಈ ನಮ್ಮ ಪ್ರಸಕ್ತ ಯುಗ ಕ್ಯೂ ಯುಗ. ಈಗ ಎಲ್ಲದಕ್ಕೂ ಕ್ಯೂ ನಿಲ್ಲಲೇಬೇಕು. ರೈಲ್ವೇ ಟಿಕೆಟ್, ಸೀಮೆಯೆಣ್ಣೆ, ಕ್ಯಾಂಪ್ ದೋಸೆ, ಸಿನೆಮಾ ಟಿಕೆಟ್, ಬಿ.ಟಿ.ಎಸ್.ಬಸ್, ತಿಮ್ಮಪ್ಪನ ದರ್ಶನ, ಕ್ರಿಮಟೋರಿಯಾ ಎಲ್ಲದರಲ್ಲೂ ಮುಲಾಜಿಲ್ಲದೇ ಕ್ಯೂ ನಿಲ್ಲಲೇ ಬೇಕು. (ರಾಜಕಾರಣಿಗಳಿಗೆ, ಅವರ ಚಂಚಾ-ಗಿಂಚಾಗಳಿಗೆ, ಹಿರಿಯ ಅಧಿಕಾರಿಗಳಿಗೆ, ಅವರ ಕುಟುಂಬ ಪರಿವಾರದವರಿಗೆ ಈ ಕ್ಯೂ ಅನ್ವಯಿಸುವುದಿಲ್ಲ. ಅನ್ವಯಿಸುವುದು ಕೇವಲ ಹುಲು ಮಾನವರಿಗೆ ಮಾತ್ರ. ಈ ಜನಾಂಗ ಅತೀ ಮಾನವರು. ಆದ್ದರಿಂದ ಅನ್ವಯಿಸುವುದಿಲ್ಲ).

ಈ ಕ್ಯೂನಲ್ಲಿ ನಿಂತು ನಿಭಾಯಿಸುವುದು ಒಂದು ಕಲೆ. ನಮ್ಮ ಕಿರಿಯರಿಗೆ ಈ ಕಲೆಯನ್ನು ರಕ್ತಗತವಾಗುವಂತೆ ಹೇಳಿಕೊಟ್ಟರೆ ಅವರು ಮುಂದೆ ಈ ಪ್ರಪಂಚದ ಯಾವುದೇ ಭಾಗಕ್ಕೂ ಹೋಗಿ ನಿಭಾಯಿಸಬಲ್ಲರು. ಈ ಕಾರಣಕ್ಕಾದರೂ ನಾವು ಈ ಕ್ಯೂ ಸಿಸ್ಟಂ ತಂದುಕೊಟ್ಟವರಿಗೆ ಆಭಾರಿಗಳಾಗಲೇ ಬೇಕು.

ನಮ್ಮ ಬಿ.ಟಿ.ಎಸ್. ಬಸ್ಸುಗಳಿಗೆ ''ತಾಳ್ಮೆಯಿಂದ'' ಕಾಯುತ್ತಾ ಕ್ಯೂನಲ್ಲಿ ನಿಂತಿದ್ದರೆ ನಾವು ನಿಂತೇ ಇರಬೇಕಾಗುತ್ತದೆ. ಹಿರಿಯರು, ಕಿರಿಯರು, ಹೆಳವರು ಇವರನ್ನು ಹಿಂದಕ್ಕೆ ತಳ್ಳಿ ಮುಂದೆ ನುಗ್ಗಿ ಒಳಗೆ ತೂರಿ ಮುಂದಿನ ಸ್ತ್ರೀಯರಿಗೆ ಮೀಸಲಿಟ್ಟ ಸೀಟನ್ನು ಕಬಳಿಸಿದರೇ ನಮಗೆ ಹೆಮ್ಮೆ ಮತ್ತು ಜಯ. ಇಲ್ಲಿ ತಾಳ್ಮೆಗೆ ಜಾಗವೇ ಇಲ್ಲ.

ಒಂದು ಸಲ ರೈಲ್ವೇ ಟಿಕೇಟಿಗಾಗಿ ಕ್ಯೂನಲ್ಲಿ ನಿಂತಿದ್ದೆ. ಕ್ಯೂ ಮುಂದಕ್ಕೆ ಹೋಗುತ್ತಲೇ ಇರಲಿಲ್ಲ. ವಿಚಾರಿಸಿದರೆ ''ಕಂಪ್ಯೂಟರ್ ಲೈನ್ ಫಾಲ್ಟ್'' ಎಂದರು. ಕ್ಯೂ ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತಿತ್ತು. ಆಗ ಒಬ್ಬ ವ್ಯಕ್ತಿ ಅಲ್ಲಿಗೆ ಬಂದ. ಯಾರನ್ನೋಹುಡುಕುವಂತೆ ನಟಿಸುತ್ತ ಅತ್ತಿಂದಿತ್ತ, ಇತ್ತಿಂದಿತ್ತ ಅಡ್ಡಾಡುತ್ತಾ ನನ್ನ ಮುಂದೇನೇ ಕ್ಯೂನಲ್ಲಿ ನುಸುಳಿಕೊಂಡ. ಶುರು ಆಯಿತು ನನಗೂ ಅವನಿಗೂ ವಾಗ್ಯುದ್ಧ. ''ನಾನು ಈ ಕ್ಯೂನಲ್ಲಿ 2 ಘಂಟೆಯಿಂದಾ ನಿಂತಿದ್ದೇನೆ. ಈಗತಾನೆ ಕಾಫೀಗೆ ಹೋಗಿದ್ದೇ'' ಅಂತ ದಬಾಯಿಸಲು ಶುರುಮಾಡಿದ. ಕೂಗಾಟ ಜೋರಾಗಲು ಅಲ್ಲೇ ಆಕಳಿಸುತ್ತ ನಿಂತಿದ್ದ ಪೋಲಿಸಪ್ಪ ಬಂದು ಕೂಲಾಗಿ ಅವನನ್ನು ರಟ್ಟೆ ಹಿಡಿದು ಕ್ಯೂ ಇಂದ ಆಚೆಗೆ ಎಳೆದು ಹಾಕಿದ. ಆ ವ್ಯಕ್ತಿ ಅಷ್ಟೇ ಕೂಲಾಗಿ ನಗುನಗುತ್ತಾ ಹಿಂದಕ್ಕೆ ಹೋದ. ಆಮೇಲೆ ಗೊತ್ತಾಯಿತು ಅವರು ರೆಗ್ಯುಲರ್ ಗಿರಾಕೀಂತ. ಅವನೊಬ್ಬ ಟಿಕೇಟ್ ದಳ್ಳಾಳೀ. ಆ ಪೋಲಿಸಪ್ಪನ ದೋಸ್ತ್. ನಾನು ತಾಳಿದವನು ಬಾಳಿಯಾನು ಅಂತ ಸುಮ್ಮನೆ ನಿಂತಿದ್ದರೆ ಇವನೊಬ್ಬನೇ ಅಲ್ಲ, ಇನ್ನೂ ಅನೇಕ ದಳ್ಳಾಳೀಗಳ ಬೆನ್ನು ನೋಡಿಕೊಂಡು ಇರಬೇಕಾಗುತ್ತಿತ್ತು.

ದಿನಂಪ್ರತಿ ನಾವು ಪೇಪರ್‌ನಲ್ಲಿ ಓದುತ್ತಲೇ ಇರುತ್ತೇವೆ. ಅಲ್ಲಿ ಇಷ್ಟು ಬಸ್ ಸುಟ್ಟರು. ಇಲ್ಲಿ ಇಷ್ಟು ಜನರಿಗೆ ಕಲ್ಲೇಟು ಬಿದ್ದು ಗಾಯಾಂತ. ನಾವೇನಾದರೂ ಅಲ್ಲಿಗೆ ಹೋಗಿ ಆ ಜನರಿಗೆ ತಾಳ್ಮೆ ಬೋಧಿಸಲು ಪ್ರಯತ್ನಿಸಿದರೆ ಮಾರನೇ ದಿನ ನಮ್ಮ ಹೆಸರು ಗಾಯಾಳುಗಳ ಪಟ್ಟಿಯಲ್ಲಿ ಬರುವುದು ಖಂಡಿತ. ಜೊತೆಗೆ ''ನಿಮಗ್ಯಾಕ್ರೀ ಇಲ್ಲದ ಉಸಾಬರಿ. ತೆಪ್ಪಗೆ ಊಟಮಾಡಿಕೊಂಡು ಮನೇಲೆ ಬಿದ್ದಿರೋಕಾಗೋಲ್ವೇನ್ರೀ?. ಎರಡು ಬಸ್ ಸುಟ್ಟು, ನಾಲ್ಕು ಜನರ ಕೈ ಕಾಲು ಮುರೀದಿದ್ರೆ ನಮ್ಮ ಡಿಮಾಂಡ್ಸ್ ಸೆಟಲ್ ಆಗುತ್ತೇನ್ರಿ'' ಅಂತ. ಅದಕ್ಕೇ ಪೇಪರ್ಲಿ ಬರೀತಿರೋದು ''ಜಗಳ ಬಿಡಿಸಲು ಹೋದವನಿಗೆ ಹೊಡೆತ'' ಅಂತ.

ಅದಕ್ಕೆ ನಾನು ಹೇಳ್ತಿರೋದು ಈ ಗಾದೇನ್ಮಾತ್ರ ನಂಬಲೇ ಬೇಡೀಂತ. ತಾಳಿಕೊಂಡೇ ಇದ್ದರೆ ನಾವು ''ಬಂದೊರಿಗೆ ಅಣ್ಣ-ಹೋದೋರಿಗೆ ತಮ್ಮಾ'' ಅಂತ ಕೂತಿರಬೇಕಾಗುತ್ತದೆ. ಒಂದೇ ಕ್ಲಾಸಿನಲ್ಲಿ ದಂಡೆಯಾತ್ರೆ ಮಾಡ್ತಾ ಇರ್ತಾರಲ್ಲ ಅವರ ಥರ. ಇಲ್ಲಾ ಆಫೀಸುಗಳಲ್ಲಿ ಸೂಪರ್ ಸೀಡ್ ಮಾಡಿಸಿಕೊಂಡು ಒಂದೇ ಟೇಬಲ್ ಹಿಂದೆ ಕೂತಿರ್ತಾರಲ್ಲಾ ಅವರ ಹಾಗೆ. ಅದಕ್ಕೇ ಹೇಳೋದು ಸೂಪರ್ ಸೀಡ್ ಆದ ಕೋಡಲೇ ಕೋರ್ಟಿಗ್ಗೋ ಇಲ್ಲಾ ಯೂನಿಯನ್ನಿಗ್ಗೋ ಹೋಗಿ ಕೂಗಾಡ್ತಾ ಇರೂಂತ.

ತಾತ್ಪರ್ಯ: ಈ ಮಹಾನ್ ಭಾರತದಲ್ಲಿ ಕಲ್ಲು ಬೀಸಿದವನು, ಬಸ್ ಸುಟ್ಟವನು, ಕೈ ಕಾಲು ಮುರಿದವನು ಮಾತ್ರಾ ಬದುಕಾನು.

ಕಾರಾತಿಥ್ಯ

ನಾ. ಕಸ್ತೂರಿ

ಯಥಾಪ್ರಕಾರ ಆ ದಿನವೂ ರಾಯರ ಕಾರು ಬ್ಯಾಂಕ್ ಚೌಕದಲ್ಲಿ ನಿಂತಿತು. ಅವರ ಎಡಗಡೆಯಿಂದ ಗೌಡರು ಬಾಗಿಲು ತೆರೆದು ಕೆಳಕ್ಕೆ ಧಾವಿಸಿದರು. ನಂತರ, ಕಾರನ್ನು ಹಿಡಿದುಕೊಂಡೇ, ''ಕ್ಷಮಿಸಿ! ನಿಮ್ಮ ಹತ್ತಿರ ಒಂದು ಮಾತಿದೆ. ಇನ್ನೇನೂ ತಿಳಿದುಕೊಳ್ಳಬೇಡಿ! ನಾಳೆಯಿಂದ ನೀವು ನನ್ನನ್ನು ಇಲ್ಲಿಯತನಕ ಕಾರಲ್ಲಿ ಕೂರಿಸಿಕೊಂಡು ಬರಬೇಡಿ... ನಿಮ್ಮ ಉಪಕಾರವನ್ನು ನಾನು ಸ್ಮರಿಸುತ್ತಿಲ್ಲ, ಎಂದಲ್ಲ....,'' ಎಂದು ಪ್ರಾರಂಭಿಸಿದರು.

''ಛೆ! ಛೆ! ನನಗೆ ಅದರಿಂದ ತೊಂದರೆ ಏನೂ ಇಲ್ಲ... ನಾನು ಕೋರ್ಟಿಗೆ ಬರುವ ದಾರಿ ಇದು. ಮೋಟರ್ ಹೋಗುತ್ತೆ... ಮೋಟರ್ ಬರುತ್ತೆ... ಅಂಥ ಹೆಚ್ಚು ಖರ್ಚೇನು ಮಹಾ?''

''ಇಲ್ಲ, ಇಲ್ಲ, ಹಾಗೆನ್ನಬೇಡಿ! ಒಂದನೆಯ ತಾರೀಖು, ಜ್ಞಾಪಕವಿದೆಯೆ? ಅವತ್ತು ಮನೆ ಅಲಾರಾಂ ಗಡಿಯಾರ ಕೆಟ್ಟುಹೋಯಿತು... ಅಡಿಗೆ ತಡ... ಊಟ ಅವಸರ.... ರುಮಾಲು ಬೇರೆ ಹೊಸದಾಗಿ ಸಿದ್ಧವಾಗಬೇಕಾಗಿತ್ತು. ಓಡಿಬರುತ್ತ ಇದ್ದೆ..... ನೀವು ಪಾಪ ಕನಿಕರ ಉಕ್ಕಿ, ಕಾರು ನಿಲ್ಲಿಸಿ ಎಲ್ಲಿಗೆ, ಎಂದು ಕೇಳಿದಿರಿ....''

''ನೀವು ಓಡುತ್ತಿದ್ದುದನ್ನು ನೋಡಿ, ನಾನು ಏನೋ, ಎಂದು ಹೆದರಿಬಿಟ್ಟೆ''

''ಕಾರು ನಿಲ್ಲಿಸಿ, ನೀವು ನನ್ನನ್ನೂ ಕೂರಿಸಿಕೊಂಡು, ಇಲ್ಲಗೆ ತಂದು ಬಿಟ್ಟಿರಿ, ಅವತ್ತು''

''ಆಯಿತಲ್ಲಾ! ಆ ಮಾತು ಏಕೆ ಈಗ?''

''ಮೊದಲನೆಯ ತಾರೀಖಿನ ಮಾತು ಹೇಳುತ್ತಿಲ್ಲ ನಾನು.... ಎರಡನೆಯ ತಾರೀಖು... ಅವತ್ತೂ ನಿಲ್ಲಿಸಿದಿರಿ.... ಏಕೆ? ಯೋಚನೆ ಮಾಡಿ.... ಅವರು ನನ್ನನ್ನು ಕಂಡಾಗ, ನಿಲ್ಲಿಸದೆ ಹೋದರೆ, ನಾನು ಏನು ತಿಳಿದು ಕೊಳ್ಳುತ್ತೇನೋ ಎಂಬ ಅನುಮಾನ ನಿಮ್ಮನ್ನು ಬಾಧಿಸಿರಬೇಕು, ಅಲ್ಲವೆ?''

''ಅಲ್ರಿ! ಈ ಪುರಾಣವೆಲ್ಲ ಯಾಕ್ರಿ ಈಗ?''

''3ನೆಯ ತಾ॥? 4ನೆಯ ತಾ॥ ನಿಮ್ಮ ಮನೆಯಿಂದ ನೀವು ಹೊರಟಾಗ, ನೀವು ಮನಸ್ಸಿನಲ್ಲಿ ಅಂದುಕೊಂಡಿರಬೇಕು... ಇವತ್ತು ಆತನನ್ನು ಅದೇ ದಾರಿಯಲ್ಲಿ ಕಂಡರೆ, ನೆಟ್ಟಗೆ ಹಾರನ್ ಮಾಡುತ್ತ ಹೊರಟೇ ಬಿಡುತ್ತೇನೆ... ಎಲ್ಲಿಂದ ಗಂಟು ಬಿದ್ದ, ಹಾಳು ಮನುಷ್ಯ?.... ಎಂದು ಹೇಳಿಕೊಂಡಿರಬೇಕು.''

''ಬ್ಯಾಂಕಿಗೆ ಹೊತ್ತಾಯಿತು. ಹೊರಡಿರಿ''

''ಅಂದರೆ, 3,4 ತಾರೀಖುಗಳಲ್ಲೂ ನನ್ನನ್ನು ಸಾಗಿಸಿದಿರಿ...... 5,6ಕ್ಕೂ ನಿಮ್ಮಿಂದ ನಿಮ್ಮ ಮನಸ್ಸನ್ನು ಕಲ್ಲು ಮಾಡಲು ಸಾಧ್ಯವಾಗಲಿಲ್ಲ... ಮನಸ್ಸಾಕ್ಷಿ ಒಳಗಡೆ ಚುಚ್ಚುತ್ತಿತ್ತು, ಅಲ್ಲವೆ? ಇಷ್ಟು ದಿವಸ ಕೂರಿಸಿಬಿಟ್ಟು ಇವತ್ತು ಕಾಣದ ಹಾಗೆ ಹೋಗುವುದು ಹೇಗೆ?.... ಎಂಬ ಬಾಧೆ ನಿಮಗೆ. ಆದರೆ, ನಾಳೆಯಿಂದ ದಯವಿಟ್ಟು ನನಗಾಗಿ ನಿಲ್ಲಿಸಬೇಡಿ''

''ಆಗಲಿ, ಗೌಡರೆ! ಇಷ್ಟು ಕಡ್ಡಾಯವಾಗಿ ನೀವು ಹೇಳಿದ ಮೇಲೆ...''

''ಕಡ್ಡಾಯವೇ? ಖಡಾ ಖಂಡಿತ ಅನ್ನಿ! ನಾಳೆ ನೀವು ನನಗಾಗಿ ಕಾರು ನಿಲ್ಲಿಸಿದರೆ, ನಾಳಿದ್ದು ನಾನು ಬೇರೆ ದಾರಿ ಹಿಡಿಯುತ್ತೇನೆ... ರಜ ತೆಗೆದುಕೊಳ್ಳುತ್ತೇನೆ... ವೇಷ ಮರೆಯಿಸುತ್ತೇನೆ... ನಿಮಗೆ ಇಷ್ಟವಿಲ್ಲದೆ ಹೋದರೆ, ನಾನು......''

''ಇಷ್ಟವಿಲ್ಲವೆಂದು ನಾನು ಹೇಳಿದನೆ?''

''ಹಾಗಾದರೆ, ನಾಳೆ ನಿಲ್ಲಿಸಿ ಕೂರಿಸುತ್ತೀರೇನು?''

''ನೀವು ಬೇಡ ಅಂದರೆ ಬೇಡ, ಬೇಕು ಅಂದರೆ, ಆಗಲಿ''

''ಅದಕ್ಕಲ್ಲ.... ನಾಳೆಯಿಂದ ನೀವು ನನ್ನನ್ನು ಕರೆದು ತುರುವುದಾದರೆ, ಪೆಟ್ರೋಲಿಗಾಗಿ ಒಂದಿಷ್ಟು ರೂಪಾಯಿ ಕೊಡುವ ಮಾತನ್ನು ನಾನು ಎತ್ತಬೇಕಾಗುತ್ತದೆ... ಅದೆಲ್ಲ ಚೆನ್ನಾಗಿರುವುದಿಲ್ಲ''

''ಚೆನ್ನಾಗಿಲ್ಲದೆ ಏನು? ಎತ್ತಿ, ಎತ್ತಿ! ಅಂದ ಹಾಗೆ ನಾನೇ ಆ ಮಾತು ನಿಮ್ಮೊಂದಿಗೆ ಆಡೋಣವೆಂತಲೇ ಇದ್ದೆ... ತಿಂಗಳು ಪೂರ್ತಿಯಾಗುತ್ತಲೂ ಲೆಕ್ಕ ಹಾಕಿ ಕೇಳೋಣವೆಂತಿದ್ದೆ. ಪೆಟ್ರೋಲ್ ಒಂದೇ ಅಲ್ಲ ನೋಡಿ... ಸ್ಪ್ರಿಂಗು, ಟೈರು, ನಟ್ಟು, ಬೋಲ್ಟು, ಎಲ್ಲ ಇವೆ, ಸವೆಯುವ ಪದಾರ್ಥ... ನಿಂತುಕೊಳ್ಳಿ, ಗೌಡರೇ! ಹೊರಟೇಬಿಟ್ಟರೇನು? ಬ್ಯಾಂಕಿಗೆ ಇನ್ನೂ ಟೈಂ ಇದೆ... ನಾಳೆ ನಿಲ್ಲಿಸಬೇಡವೇನು? ಹಾಗಾದರೆ...''



''ಈಗ್ಲಾದ್ರೂ ನನ್ನ ಫೈಲ್ ಮುಂದೆ ಹೋಯ್ತಾ ಅಂತ ನೋಡುಕ್ಕೆ ಬಂದೆ''

"ಹ್ಯಾಟ್ಸ್ ಆಫ್"

ಅಪರಂಜಿ ಸಂಪಾದಕರಿಗೆ,

ಅಪರಂಜಿ Team ಗೆ HATS OFF. ಯುಗಾದಿ ಸಂಚಿಕೆ 'ಬಹಳ n' (= ಬಹಳ To The Power N) ಚೆನ್ನಾಗಿ ಬಂದಿದೆ. ಪ್ರತಿ ಪುಟದಲ್ಲೂ ಶ್ರಮ ಎದ್ದು ತೋರುವ ಹಾಗಿದೆ. ಒಳ್ಳೆ ಮುದ್ರಣ ಅತ್ಯುತ್ತಮವಾದ ಕಾಗದ ಮತ್ತು ಇವುಗಳಿಗೆ ಮಿಗಿಲಾಗಿ ಮೌಲಿಕ ಹಾಸ್ಯ ಇವುಗಳ ಸಮ್ಮಿಶ್ರಣ ತುಂಬಾ ಅಪೀಲಿಂಗ್ ಆಗಿವೆ. ಕನ್ನಡದ, ತಮಿಳಿನ, ತೆಲುಗಿನ, ಮಲಯಾಳದ (ಇವು ನಾಲ್ಕು ಭಾಷೆಗಳ ಮ್ಯಾಗಜೀನ್‌ಗಳನ್ನು ಪ್ರತಿ ದಿನ ನೋಡುವ ಸೌಭಾಗ್ಯ ನನ್ನದು) ಭಾಷೆಗಳ ಯಾವುದೇ ನಿಯಕಾಲಿಕಗಳಿಗಿಂತಲೂ ಸುಮಾರು ಕಿಲೋಮೀಟರುಗಳಷ್ಟು ಮೇಲಿದೆ ಅಪರಂಜಿಯ ಪ್ಲೇಸು!

ಯಾವ ಲೇಖನ ಅತ್ಯುತ್ತಮವಾಗಿರಬಹುದು ಎಂದು ಎರಡೆರಡು ಬಾರಿ ಅಪರಂಜಿ ತಿರುವಿದೆ. ಮುಂದಿನಿಂದ ಓದಿದೆ ಹಿಂದಿನಿಂದ ಓದಿದೆ. ಇದೇ ಲೇಖನ ಬೆಸ್ಟ್ ಅಂತ ತೀರ್ಮಾನಿಸಲು ಆಗಲಿಲ್ಲ! ಅದರಿಂದ ಬಹುಮಾನ ಹಂಚಲು ಮೂರು ದಾರಿಗಳಿವೆ.

1. ಎಲ್ಲರಿಗೂ
2. ಯಾರಿಗೂ ಇಲ್ಲ
2. ಜಾಕ್‌ಪಾಲ್ ತರಹ ಮುಂದಿನ ದಿನಕ್ಕೆ ಮುಂದೂಡುವುದು.

ಕೇಫರ ಷೆಡ್-ಗ್ರಾಸ್-ಬಾಟಂ ವೊಡ್ ಹೌಸ್‌ನ ಖುಷಿ ನೀಡಿತು. ಪ್ರಭು, ಅರಾಸೇ ಅವರ ಲೇಖನಗಳು ನಮ್ಮ ಗಂಭೀರ ವಿಮರ್ಶಕರು ಹೇಳುವ ಹಾಗೆ ಪ್ರಬುದ್ಧ ಹಾಸ್ಯಗಳು. ಖದೀಮರಿಗೊಂದು ಶಾಲೆ ಸಂಗಡ ಸಂಗಡ ನಿದ್ದೆಯ ಮಹತ್ವ (ಸೂರಿ) ನೂತನ ತಪೋವಿಧಾನ (ಡಿಸೋಜ) ತಿಳಿನಗೆ ತರಿಸಿದವು. ಸಂಸ್ಕೃತಿ ಮೇಲೆ ಎರಡು, ನಿದ್ರೆ ಕುರಿತು ಎರಡು, ವೈದ್ಯರ ಕುರಿತು ಎರಡು ಮೆಮಾರ್ಸ್ ಸಂಬಂಧಿಸಿದ ಹಾಗೆ ಎರಡು... ಹೀಗೆ ಲೇಖನಗಳು ವೈವಿಧ್ಯತೆಯಿಂದ ಕೂಡಿವೆ. 18-18, ರಸಸ್ವಾದನೆ, ಲಂಚೋಪಾಖ್ಯಾನ ಹಾಯ್ ಅನಿಸಿದರೆ ಹಾಗೇ ಆಗಬೇಕು ಹಾಯ್ ಹಾಯ್ ಅನಿಸಿತು. ಹಾಯ್ ಅಂದರೇನೂಂತ ಕೇಳಬೇಡಿ. ನನಗೇ ತಿಳೀದು. ಇನ್ನು CARICATURES ಅಂತೂ ಇಂಗ್ಲೀಷ್ ಪತ್ರಿಕೆಗಳನ್ನು ಮೀರಿಸಿವೆ. ಕಪ್ಪುಬಿಳುವು ಫೋಟೋಗಳಲ್ಲಿನ ಹಾಸ್ಯ ಅದೇಕೋ 'ಕ್ಲಿಕ್' ಆಗಿಲ್ಲ. ಇದು ನನ್ನ ಅನಿಸಿಕೆ.


ಮನುಷ್ಯ ಬೆಳೀತಾ ಬೆಳೀತಾ ಮೆಚ್ಯೂರ್ ಆಗ್ತಾನೆ ಅಂತ ಗೋಪಾಲಕೃಷ್ಣ ಅವರ ಲೇಖನ ಓದಿದಾಗ ತಿಳಿಯಿತು. ಅವರ ಲೇಖನದಲ್ಲಿ ಮುದ್ರಾರಾಕ್ಷಸನು ಇಷ್ಟು ಸಂತೋಷದಿಂದ ಮ್ಯಾರಾಥಾನ್ ಡ್ಯಾನ್ಸ್ ನಡೆಸಿದಾನೆ ಅಂದರೆ ಲೇಖಕರಿಗೂ ವಯಸ್ಸಾಗುತ್ತಾ ಆಗುತ್ತಾ ಆಗುತ್ತಾ ಅವರ ಬರವಣಿಗೆ ಕೊಂಚ ಓದುವ ಹಾಗಾದರೂ ಇರಲಿ ಮತ್ತು ಸಂಪಾದಕರಿಗೆ ತಲೆನೋವು ತಪ್ಪಲಿ. ಅತಿ ಹೆಚ್ಚು ತಲೆತಿಂದ ಲೇಖನ ಎಂಬ

ಪ್ರಶಸ್ತಿ ನೀಡುವದಾದರೆ ಇವರ ಬ್ರಹ್ಮಲಿಪಿ ಅರಿಯಲು ನೀವು ಪಟ್ಟಿರುವ ಶ್ರಮ ಮತ್ತು ತೊಂದರೆಗೆ ಲೇಖಕರಿಂದ ಸದರಿ ಪ್ರಶಸ್ತಿಯನ್ನು ಪಡೆಯಲು ನೀವೇ ಅರ್ಹರು! ಇದು IN LIGHTER VEIN ಮಾತ್ರ. ಹಾಗೇನಾದರೂ ಬಹುಮಾನ ಇದ್ದರೆ ಅದು ಲೇಖಕರಿಗೇ ದಕ್ಕಲಿ ಇದು NON LIGHTER WAY!

ಸಂಚಿಕೆಯನ್ನು ಅತ್ಯುತ್ತಮವಾಗಿ ರೂಪಿಸಿರುವುದಕ್ಕೆ ತಮಗೆ ಮತ್ತೊಂದು ಸಲ CONGRATS!

ತಮ್ಮ

'ಪ್ರಭಾ'



''ನಮ್ಮ ನಾಯಕರ ಮೇಲೆ ಅನೇಕ ಆಪಾದನೆ ಇರಬಹುದು. ಆದ್ರೂ ಅವರು ನಿರಪರಾಧಿ ಅಂತ ಸಾಬೀತಾಗೋ ತನಕ ವಿಚಾರಣೆ ನಡೆಸ್ತಾನೇ ಇರ್ತೇವೆ...''

ಡಿಸ್ಕೌಂಟ್ ಸೇಲ್ಸ್

ಅಣ್ಣಾಸ್ವಾಮಿ ಮಾಚಲಿಯಾರ್

ಭಾನುವಾರ ಮಧ್ಯಾಹ್ನ, ಹೊರಗೆ ರಣಬಿಸಿಲು, ಫ್ಯಾನ್ ಗಾಳಿಗೂ ಬಿಸಿಕಟ್ಟಿ ತಂಗಾಳಿಗೆ ಬದಲು ಬಿಸಿಗಾಳಿ ಬೀಸುತ್ತಿತ್ತು. ಹೊಟ್ಟೆ ತುಂಬಾ ಓದಕಿದ ಬೇಳೆ ಹುಳಿ, ಅನ್ನ, ಆಂಬೊಡೆ, ಟೊಮ್ಯಾಟೋ ಸೂಪ್, ಫ್ರೂಟ್ ಸಾಲಡ್ ತಿಂದು ಕಣ್ಣಿಗೆ ನಿದ್ರೆಯ ಜೋಂಪು. ಅಪರೂಪಕ್ಕೆ ಭಾನುವಾರ ಮನೆಯಲ್ಲಿದ್ದೀನಿ ಅಂತ ನನ್ನಾಕೆ ತಾನು ಹೊಸದಾಗಿ ಕಲಿತ ಹೊಸರುಚಿ ಖಾದ್ಯಗಳನ್ನು ಮಾಡಿದ್ದಳು. ಸಾಮಾನ್ಯವಾಗಿ ಭಾನುವಾರ ನಾನು ಮನೆಯಲ್ಲಿರುವುದು ಅಪರೂಪ, ಯಾವುದಾದರೂ ಪುಸ್ತಕದ ಬಿಡುಗಡೆ, ಅಥವಾ ಪುಸ್ತಕ ಪ್ರದರ್ಶನ ಇಲ್ಲವೇ ಸಾಹಿತಿಗೆ ಸನ್ಮಾನ, ಯಾವುದೂ ಇಲ್ಲದಿದ್ದರೆ ಯಾವುದಾದರೂ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಒಟ್ಟಾರೆ ಯಾವುದಾದರೊಂದು ಕಾರಣದಿಂದ ಮನೆಯಿಂದ ಹೊರಟುಬಿಡುತ್ತಿದ್ದೆ. ಈಗ ಕನ್ನಡದ ಕಾರ್ಯಕ್ರಮಗಳಲ್ಲಿ ಮಧ್ಯಾಹ್ನ ಊಟದ ವ್ಯವಸ್ಥೆಯೂ ಮಾಡುವುದರಿಂದ ಊಟದ ಚಿಂತೆಯಿಲ್ಲ. ಕಾರ್ಯಕ್ರಮಗಳು ಮುಗಿದು ಬಿ.ಟಿ.ಎಸ್. ಹಿಡಿದು ಮನೆಗೆ ಬರುವ ವೇಳೆಗೆ ಸಂಜೆಯಾಗಿರುತ್ತಿತ್ತು. ಸಂಜೆ ಕನ್ನಡ ಚಲನಚಿತ್ರ ನೋಡಲು ಕುಳಿತರೆ ಆಯಿತು. ಮಾತಿಗೊಂಡು-ಹಾಡಿಗೊಂದು ಜಾಹೀರಾತುಗಳ ಸರಮಾಲೆ ಮುಗಿದು ಚಲನ ಚಿತ್ರದ ಕತೆ ಮುಗಿಯಿತು ಅನ್ನೋ ವೇಳೆಗೆ ಸುದ್ದಿಪ್ರಸಾರ ಊಟ-ನಿದ್ರೆ-ಬೆಳಿಗ್ಗೆ ಎದ್ದರೆ ಕೆಲಸಕ್ಕೆ ಹೋಗುವ ಆತುರ.

ಈ ಯಂತ್ರ ಜೀವನದ ನಡುವೆ ಒಂದು ದಿನ ಭಾನುವಾರ ಬಿಡುವಾಗಿ ಮನೆಯಲ್ಲಿ ನಾನು ಇದ್ದದ್ದು ನನ್ನಾಕೆಗೆ ಖುಷಿಯೋ ಖುಷಿ.

ಫ್ಯಾನ್ ಗಾಳಿಯ ಬಿಸಿ ತಾಳಲಾರದೆ ಆರಿಸಿ, ಬಿದುರಿನ ಬೀಸಣಿಗೆ ನೀರು ಚಿಮುಕಿಸಿ ಬೀಸಿಕೊಳ್ಳತೊಡಗಿದೆ, ಸ್ವಲ್ಪ ಮೈ ತಂಪಾಗಿ ನಿದ್ರೆ ಬಂತು. ಆರಾಮ ಖುರ್ಚಿಯಲ್ಲಿ ಕುಳಿತು ನನಗರಿವಿಲ್ಲದೆ ನಿದ್ರೆಗೆ ವಶನಾದೆ.

ಪಕ್ಕದಲ್ಲಿ ಬಾಂಬ್ ಬಿದ್ದಂತಾಗಿ ಗಾಬರಿಯಿಂದ ಕಣ್ಬಿಟ್ಟೆ; ದೇವೇಗೌಡರ ರಾಜೀನಾಮೆ ಸುದ್ದಿ ಕೇಳಿ ಸೀತಾರಾಮ ಕೇಸರಿ ನಗುವ ಹಾಗೆ ಕಿತಾಪತಿ- ಅಲ್ಲ ಅಲ್ಲ- ಸೀತಾಪತಿ ನಗುತ್ತ ನಿಂತಿದ್ದ, ಅವನು ನಗಲು ತೊಡಗಿದರೆ ಭೂಕಂಪವಾಗುತ್ತೆ, ದೊಡ್ಡದನಿಯ ಏರಿಳಿತಕ್ಕೆ ಭೂಮಿ ನಡುಗುತ್ತೆ ಹಕ್ಕಿಗಳು ಹೆದರಿ ಮರಗಿಡಗಳಿಂದ ಹಾರುತ್ತವೆ, ಸೀತಾಪತಿ ನನ್ನ ಹೆಂಡತಿಯ ಕೊನೆಯ ತಮ್ಮ. ಅವನು ಬಂದನೆಂದರೆ ನನ್ನ ಪರ್ಸಿಗೆ ಏನೋ ಸಂಚಕಾರವಿದೆ ಅಂತ ಅರ್ಥ.

''ಯಾಕಯ್ಯಾ ಹಾಗೆ ನಗ್ತಿದ್ದೀಯ!''

''ಮತ್ತೇನು ಮಾವಯ್ಯ- ರಾಜಕಾರಣಿಗಳು ಸಾರ್ವಜನಿಕ ಸಭೆಗಳಲ್ಲಿ ನಿದ್ರೆ ಮಾಡೋ ಹಾಗೆ - ಮಧ್ಯಾಹ್ನದ ಬೆಳಕಿನಲ್ಲಿ ನಿದ್ರೆ ಮಾಡ್ತಿದ್ದೀಯ''

''ಸೀತಾಪತಿ-ನೀನು ಬಂದ್ರೆ ಏನೋ ಕಿತಾಪತಿ ಇರುತ್ತೆ, ನಾರದಾ ಕಲಹ ಪ್ರಿಯ ಅಂದಹಾಗೆ ನೀನು ಬಂದದ್ದೇನು ಕಾರಣ ಹೇಳು''

''ಅದೇ ಮಾವಯ್ಯಾ-ಅಶೋಕ ಹೋಟೆಲ್ಲಿನಲ್ಲಿ ಷೂ ಬಜಾರ್ ನಡೀತಿದೆ. ಡಿಸ್ಕೌಂಟ್ ಸೇಲ್ 50% ಅಕ್ಕನಿಗೆ ಹೇಳಿದ್ದೆ ಹೋಗೋಣ ಅಂದಿದ್ಲು...''

''50% ಡಿಸ್ಕೌಂಟ್ ಸೇಲ್?!'' ನನಗೆ ಅರ್ಥವಾಗಲಿಲ್ಲ. ತಯಾರಿಕೆ ಬೆಲೆಯ ಅರ್ಧ ಬೆಲೆಗೆ ಮಾರಿದರೆ ಬರುವ ಲಾಭವೇನು? ಮೇಲಿನ ಖರ್ಚು? ಇವೆಲ್ಲ ಹೇಗೆ?

''ಏನ್ ಮಾವಯ್ಯಾ ಯೋಚ್ನೆಮಾಡ್ತಾ ಕುಳಿತುಬಿಟ್ರಿ?''

''ಇವೆಲ್ಲಾ ಹೇಗೆ ಸಾಧ್ಯ?''

''ಅದೆಲ್ಲಾ ನಮಗ್ಯಾಕೆ? ನಮಗೆ ಲಾಭ ಆಗುತ್ತಾ ಅಷ್ಟು ನೋಡಿ''

ನನ್ನಾಕೆ ರಾಗವಾಗಿ ಹೇಳಿದ್ಲು ''ಏಳ್ರೀ ಎದ್ದು ರೆಡಿಯಾಗಿ-ಸೀತಾಪತಿ ಅಷ್ಟು ಹೇಳಿದ್ರೂ ಅನುಮಾನಾನ?'' ನಾನು ಬಚ್ಚಲು ಮನೆ ಕಡೆಗೆ ಹೊರಟೆ. ಒಂದು ತಟ್ಟೆಯಲ್ಲಿ ಆಂಬೊಡೆ ಎಂ.ಟಿ.ಆರ್. ಚಿಲ್ಲೀಸಾಸ್, ಒಂದು ಬಟ್ಟಲಿನಲ್ಲಿ ಫ್ರೂಟ್ ಸಾಲಡ್ ಕೊಡುತ್ತ ''ಅವ್ರು ಬರೋದು ನಿಧಾನವಾಗುತ್ತೆ ಸಾವಕಾಶವಾಗಿ ಕುಳಿತುಕೊಂಡು ತಿನ್ನಿ'' ಅನ್ನುತ್ತಿದ್ದಳು ನನ್ನ ಹೆಂಡ್ತಿ.

''ಈ ಉಪಚಾರವೆಲ್ಲ ಯಾಕಕ್ಕ?'' ಎನ್ನುತ್ತ ಸೀತಾಪತಿ ಸೋಫಾ ಮೇಲೆ ಕುಳಿತ.

★★★★

ನಾವು ಷೂ ಬಜಾರ್ ತಲುಪಿದಾಗ ಆರುಗಂಟೆ ಸಮಯ. ಹೊರಗಡೆ ವಾತಾವರಣ ತಣ್ಣಗಿತ್ತು. ಬಣ್ಣಬಣ್ಣದ ದೀಪಗಳ ಅಲಂಕಾರ, ಆಕರ್ಷಕ ಬಣ್ಣಗಳ ಸೀರೆಗಳನ್ನು ಉಟ್ಟುಕೊಂಡ ರೂಪಸಿಯರು ಹೂನಗೆ ಚೆಲ್ಲಿ ನಮ್ಮನ್ನು ಸ್ವಾಗತಿಸಿದರು. ಒಳಗೆ ದೊಡ್ಡ ಹಜಾರದಲ್ಲಿ ಬಣ್ಣಬಣ್ಣ ಕಾಗದಗಳ ಅಲಂಕಾರ ಮಾಡಿದ್ರು. ಫ್ಲಡ್ ಲೈಟ್‌ಗಳು ಕಣ್ಣುಕೋರೈಸುವಂತೆ ಬೆಳಗುತ್ತಿದ್ದವು. ಸಣ್ಣನೆ ದನಿಯಲ್ಲಿ ಹಿಂದಿ ಸಿನೆಮಾ ಹಾಡು ''ಮುಝೆ ನಹೀ ಮಾಲುಮ್ ಥಾ ಮೈ ತುಝೆ ಪ್ಯಾರ್ ಕರ್ತಾ ಹೂಂ...'' ಕೇಳಿ ಬರುತಿತ್ತು. ಬೇರೆ ಬೇರೆ ಸ್ಥಳಗಳಲ್ಲಿ ಚಪ್ಪಲಿ, ಷೂ, ಸಾಕ್ಸ್, ಹವಾಯ್ ಟ್ರ್ಯಾಟ್, ಎಲ್ಲಾ ವಿಧದ ಪಾದರಕ್ಷೆಗಳು ಇದ್ದವು. ಪಾದರಕ್ಷೆಗಳು ರಾಶಿರಾಶಿಯಾಗಿ ಬಿದ್ದಿದ್ದವು. ಒಂದೊಂದು ರಾಶಿ ಒಂದೊಂದು ಅಳತೆಯವು.

ನನ್ನ ಕಾಲಿನ ಸೈಜು ಹತ್ತು. ಹತ್ತರ ಸೈಜಿನ ರಾಶಿ ಬಳಿ ಹೋದೆ.

ಬಾಟ, ಕರೋನ, ಲೋಕಲ್, ಲಿಡ್ಕರ್, ಹೀಗೆ ಎಲ್ಲಾ ಬ್ರ್ಯಾಂಡ್ ಪಾದರಕ್ಷೆಗಳಿದ್ದವು ನಾನು ಕೋವಾಡಿಸ್ ಚಪ್ಪಲಿಗಾಗಿ ಹುಡುಕಿದೆ. ಒಂದು ಚಪ್ಪಲಿ ಮಾತ್ರ ಸಿಕ್ಕಿತು. ಮತ್ತೊಂದು ರಾಶಿಯಲ್ಲಿ ಹುಡುಗಿದೆ ''ಉಹುಂ ಇದ್ದದ್ದು ಒಂದೇ!''

ಚಂಡಮಾರುತದ ಹಾಗೆ ಜೋರಾಗಿ ನಗುತ್ತಾ ಸೀತಾಪತಿ ಕೇಳಿದ

''ಒಂದು ಚಪ್ಪಲಿ ತಗೊಂಡು ಏನ್ಮಾಡ್ತೀರ ಮಾವಯ್ಯಾ- ಬೇರೆ ಜೊತೆ ತಗೊಳ್ಳಿ''

''ಏನೊಂದ್ರೆ, ನೀವು ಹೋದ ತಿಂಗಳು ಬಸ್ಸಿನಲ್ಲಿ ಬರ್‍ತಾಗ ಒಂದು ಕಾಲಿನ ಚಪ್ಪಲಿ ಕಳ್ಕೊಂಡಿಟ್ರಿ. ಮನೇಲಿ ಬಲಗಾಲಿಂದಿದೆ. ಇದು ಎಡಗಾಲಿಂದು- ತಗೊಂಡ್ರೆ ಜೊತೆಯಾಗುತ್ತೆ ಅಲ್ವೇನ್ರೀ'' ಎಂದಳು ನನ್ನ ಮಡದಿ. ಕೂಡಲೇ ನನಗೆ ನಾನು ಚಪ್ಪಲಿ ಕಳಕೊಂಡ ಪ್ರಕರಣವನೆನಪಾಯ್ತು. ಆಫೀಸಿಗೆ ಆತುರವಾಗಿ ಹೊರಟ ನಾನು, ಮೊದಲೇ ತುಂಬ ಭರ್ತಿಯಾಗಿ ಬಂದಿದ್ದ ಬಸ್ಸನ್ನು ನೂಕು ನುಗ್ಗಲಿನಲ್ಲಿ ಹತ್ತಿ ಫುಟ್ ಬೋರ್ಡ್ ಮೇಲೆ ಒಂಟಿ ಕಾಲಿನಲ್ಲಿ ನಿಂತಿದ್ದೆ. ನನ್ನ ಹಿಂದೆ ನಿಂತಿದ್ದ ಯುವಕ ನನ್ನ ಎಡಗಾಲಿನ ಚಪ್ಪಲಿಯನ್ನು ಕಾಲಿನಿಂದ ಒದ್ದಿದ್ದ ಚಪ್ಪಲಿ ಗಾಳಿಗೆ ತೂರಿ ಹೊರಗೆ ಬಿದ್ದಿತ್ತು. ಬಸ್ ಹೊರಟಿತ್ತು ಅವನು ಇಳಿದಿದ್ದ. ನಾನು ಪರದಾಡಿದೆ, ಓಡುವ ಬಸ್ಸಿನಿಂದ ಇಳಿಯಲಾಗಲಿಲ್ಲ ಮೂರು ದಿನದ ಹಿಂದೆ ಮುನ್ನೂರು ರೂಪಾಯಿ ಕೊಟ್ಟು ಕೊಂಡುಕೊಂಡ ಚಪ್ಪಲಿ ಕಳಕೊಂಡು ವ್ಯಥೆಪಟ್ಟಿದ್ದೆ. ಈಗ ಎಡಗಾಲಿನ ಜೊತೆ ಚಪ್ಪಲಿ ಸಿಕ್ಕಿದೆ.

ಚಪ್ಪಲಿ ತಿರುಗಿಸಿ ನೋಡಿದೆ. ಯಾಕೋ ಅನುಮಾನವಾಯಿತು ಚಪ್ಪಲಿ ಪಟ್ಟಿ ಹಿಂದೆ ತಿರುಗಿಸಿ ನೋಡಿದೆ. ನನ್ನ ಹೆಸರಿನ ಮೂರಕ್ಷರಗಳಿವೆ.

''ಸೀತಾಪತೀ!'' ಕೂಗಿದೆ

''ಏನ್ ಭಾವ?''

''ಇದು ನನ್ನದೇ ಚಪ್ಪಲಿ, ನಾನು ಕಳಕೊಂಡ ಚಪ್ಪಲಿ - ಇಲ್ಲಿ ಹೇಗೆ ಬಂತು?''

ನನ್ನ ಕೂಗು ಕೇಳಿ ಸುಂದರಿಯೊಬ್ಬಳು ಬಂದಳು.

''ಈ ಚಪ್ಪಲಿ ಬೇಕಾ ಸಾರ್! ಇದರ ಜೊತೆ ಇಲ್ಲ ಒಂದೇ ಇರೋದು ನೀವು 25% ಬೆಲೆ ಕೊಟ್ಟರೆ ಸಾಕು''

''ಇದು ನನ್ನ ಚಪ್ಪಲಿ ನಿನಗೆ ಹೇಗೆ ಸಿಕ್ಕಿತು?''

''ನಿಮ್ಮ ಚಪ್ಪಲಿ ಅಂತ ಹೇಗೆ ಹೇಳ್ತೀರಿ?''

''ಚಪ್ಪಲಿ ಪಟ್ಟಿ ಹಿಂದೆ ನನ್ನ ಹೆಸರಿನ ಅಕ್ಷರಗಳಿವೆ''

''ಅದು ನಮಗೆ ಸಪ್ಲೈ ಮಾಡುವವರ ಹೆಸರು''

''ನನ್ನ ಕೈ ಬರಹ!'' ನಾನೇ ಬರೆದದ್ದು ಗುರುತಿಗೆ''

''ಕೈ ಬರಹ ಎಲ್ಲರದೂ ಒಂದೇ''

ಎಂದು ನಗುತ್ತಾ ಸೀತಾಪತಿ ಕಡೆಗೆ ಸನ್ಮೋಹನ ದೃಷ್ಟಿ ಬೀರಿ

''ನಮ್ಮದು ಸಗಟು ಖರೀದಿ, ಈ ರಾಶಿಗಳನ್ನು ನೋಡಿ, ಹೀಗಿರುವಾಗ ನಿಮ್ಮ ಚಪ್ಪಲಿ ಯಾಕೆ ಮಾರ್‍ತೀವಿ, ಹಾಗೆಲ್ಲ ಇದ್ದರೆ ಅಶೋಕ ಹೋಟೆಲಿನಲ್ಲಿ ನಮಗೆ ಬಿಡ್ತಿರಲಿಲ್ಲ. ನಮ್ಮ ಅಂಗಡೀನ ಮಂತ್ರಿಗಳು ಉದ್ಘಾಟನೆ ಮಾಡ್ತಿರಲಿಲ್ಲ'' ಎಂದು ಹೇಳಿದಳು,

ಸೀತಾಪತಿ ಮಹಾಪರಾಧ ಮಾಡಿದ ಹಾಗೆ

''ಎಕ್ಸ್‌ಟ್ರೀಮ್ಲಿ ಸಾರಿ ಮೇಡಂ, ಅರವತ್ತಿಗೆ ಅರಳೋ ಮರುಳೋ ಅನ್ನೋ ಹಾಗೆ ಹದಿನೆಂಟನೆ ಶತಮಾನದವರು ಮರೆತುಬಿಡಿ, ನೀವು ಈ ಚಪ್ಪಲಿ ಪ್ಯಾಕ್ ಮಾಡಿಕೊಡಿ'' ಎಂದ. ಕೆಂಗಣ್ಣು ಬಿಡುತ್ತಾ ನನ್ನಾಕೆ ಅವಳ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ನನ್ನ ಪರ್ಸ್ ತೆಗೆದು ಅವಳಿಗೆ ಹಣ ನೀಡಿದಳು.

ಜರಿಗೆ ಅಂಚಿನ ಮಿಂಚುವ ಹೈ ಹೀಲ್ ಷೂಗಳನ್ನು ತಾನು ತೆಗೆದುಕೊಂಡಿದ್ದಳು. ಅದಕ್ಕೂ ನನ್ನ ಪರ್ಸಿನಿಂದ ಹಣ ಕೊಡಲು ಮರೆಯಲಿಲ್ಲ. ಒಂದು ಜೊತೆ Trot ತೆಗೆದುಕೊಂಡ ಸೀತಾಪತಿ

''ಬರುವಾಗ ಅರ್ಜೆಂಟ್‌ನಲ್ಲಿ ಹಣ ತರೋದು ಮರೆತುಬಿಟ್ಟೆ. ಇನ್ನೊಂದು ಸಾರಿ ಬಂದಾಗ ಕೊಡ್ತೀನಿ ಅಕ್ಕಾ'' ಎಂದು ಹೇಳಿ ಬಾಗಿಲ ಬಳಿಗೆ ಹೊರಟ ವಿಧಿಯಿಲ್ಲದೆ ಅವನ ಚಪ್ಪಲಿಗೂ ನಾನೇ ಹಣ ಕೊಡಬೇಕಾಯಿತು.

ಮನೆ ಸೇರಿದ ಕೂಡಲೇ ನನ್ನ ಬಲಗಾಲಿನ ಚಪ್ಪಲಿ ತಂದು ಈ ಚಪ್ಪಲಿ ಜೊತೆ ಹೋಲಿಸಿ ನೋಡಿದೆ. ಅನುಮಾನವೇ ಇಲ್ಲ ಅದೇ ಜೊತೆ. ಕಳೆದು ಹೋದ ಒಂದು ಚಪ್ಪಲಿ ಪಡೆಯಲು ನಾನು ಖರ್ಚು ಮಾಡಿದ ಒಟ್ಟು ಹಣ ಲೆಕ್ಕ ಹಾಕಿದಾಗ, ದೇವೇಗೌಡರನ್ನು ಕಂಡಾಗ, ಹೆಗಡೆಯವರಿಗೆ ಆಗುವ ಹಾಗೆ, ನನ್ನ ರಕ್ತದ ಒತ್ತಡ ಏರಿತು.

★★★

ಕೆಲವು ಗುಂಪುಗಳು ಪೋಲಿ ಅಲೆಯುವ ಹುಡುಗರನ್ನು ದಿನಗೂಲಿಗೆ ನೇಮಿಸಿಕೊಂಡು, ದೇವಾಲಯಗಳ ಬಳಿ ಹೊಸ ಚಪ್ಪಲಿ, ಷೂಗಳನ್ನು ಕದ್ದು ತರುವುದು ಮದುವೆಮನೆ- ಮದುವೆ ಛತ್ರಗಳಲ್ಲಿ; ಬಸ್ ರಷ್ ಇರುವಾಗ ಫುಟ್‌ಬೋರ್ಡ್‌ನಲ್ಲಿ ಒಂಟಿಕಾಲಿನಲ್ಲಿ ನಿಂತಿರುವವರ ಚಪ್ಪಲಿಗಳನ್ನು ಕದ್ದು ಶೇಖರಿಸಿ, ದೊಡ್ಡ ರಾಶಿಮಾಡಿ ಹರಾಜು ಮಾಡುತ್ತಾರೆಂದು, ಅವುಗಳಲ್ಲಿ ಉತ್ತಮವಾದವುಗಳನ್ನು ಜೊತೆಮಾಡಿ 50% ಬೆಲೆಗೆ ಡಿಸ್ಕೌಂಟ್‌ನಲ್ಲಿ ಮಾರುತ್ತಾರೆಂದು ನನ್ನ ಹರಟೆ ಕಟ್ಟೆ ಗೆಳೆಯರೊಬ್ಬರು ಹೇಳಿದರು. ನಿಜವೋ ಸುಳ್ಳೋ ಆ ದೇವರೇ ಬಲ್ಲ.

★★★★

ನಮ್ಮ ಏರಿಯಾದಲ್ಲಿ ಜನಪ್ರಿಯವಾಗಿದ್ದ ಗ್ರಾಹಕರ ನ್ಯಾಯಬೆಲೆ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸ್ನೇಹಿತರ ಒತ್ತಾಯಕ್ಕೆ ಕಟ್ಟುಬಿದ್ದು ಅಭ್ಯಾರ್ಥಿಯಾಗಿ ನಿಂತು ಹೆಚ್ಚು ಖರ್ಚಿಲ್ಲದೆ ಅತ್ಯಧಿಕ ಮತ ಪಡೆದು ಗೆದ್ದೆ. ನನ್ನ ಸ್ನೇಹಿತರಿಗೆ ಖುಷಿಯೋ ಖುಷಿ. ಗ್ರಾಹಕರ ಪರವಾಗಿ ನಾನು ಹೋರಾಡಿ ಹಲವಾರು ಅನುಕೂಲಗಳನ್ನು ಕಲ್ಪಿಸಿಕೊಟ್ಟೆ. ನನ್ನ ರೀತಿ ನೋಡಿದ ಇತರೆ ನಿರ್ದೇಶಕರು ನನಗೆ ಯಾವ ಹುದ್ದೆಯನ್ನೂ ನೀಡದೆ, ಬಿಜೆಪಿಯನ್ನು ಬದಿಗಿಟ್ಟ ಇತರೆ ಪಕ್ಷಗಳ ಹಾಗೆ ನಾನು ಒಂಟಿ ಹೋರಾಟಗಾರನಾದೆ. ತಿಳಿದೋ ತಿಳಿಯದೆಯೋ ಯಾವುದೋ ಒಂದು

ಜವಾಬ್ದಾರಿಯನ್ನು ಕೊಡಬೇಕೆಂದುಕೊಂಡು, ತನಿಖಾಧಿಕಾರಿ ಹುದ್ದೆ ನೀಡಿದರು. ಅದೇ ಅವರಿಗೆ ಮಾರಕಾಸ್ತ್ರವಾಯಿತು.

''ರೇಷನ್ ಅಂಗಡಿ ತಕ್ಕಡಿ ಸರಿಯಿಲ್ಲ'' ಎಂಬ ಸದಸ್ಯರ ದೂರಿನ ಮೇಲೆ ತನಿಖೆ ಮಾಡಿ ಸರಿ ಮಾಡಿದೆ.

''ಬಟ್ಟೆ ಅಂಗಡೀಲಿ ಹಳೇಬಟ್ಟೆ ಮಾರ್ತ್ತಿದ್ದಾರೆ'' ಎಂಬ ಸದಸ್ಯರ ದೂರಿನ ಮೇಲೆ ತನಿಖೆ ನಡೆಸಿ ಹೊಸಬಟ್ಟೆ ಖರೀದಿ ಮಾಡಿಸಿದೆ.

''ಕಂತು ಕಟ್ಟಿದರೂ ಸಾಲ ಕೊಡ್ತಿಲ್ಲ'' ಎಂಬ ದೂರಿನ ಮೇಲೆ ಲೆಕ್ಕದ ಕಡತ ಪರಿಶೀಲಿಸಿ ಅರ್ಹ ಸದಸ್ಯರಿಗೆ ಸಾಲ ಕೊಡಿಸಿದೆ. ಬಹಳ ಬೇಗ ನಾನು ಜನಪ್ರಿಯನಾದೆ.

ದೀಪಾವಳಿ ಹಬ್ಬ ಬಂತು. ಸದಸ್ಯರಿಗೆ ಡಿಸ್ಕೌಂಟ್ ಮೇಲೆ ವ್ಯಾಪಾರ ಮಾಡಬೇಕೆಂದು ಬೋರ್ಡ್ ಮೀಟಿಂಗ್‌ನಲ್ಲಿ ಹೋರಾಡಿದೆ. ಆಶ್ಚರ್ಯವೆಂಬಂತೆ ಮೆಜಾರಿಟಿ ಡೈರೆಕ್ಟರುಗಳು ನನ್ನ ವಾದಕ್ಕೆ ಬೆಂಬಲ ನೀಡಿದರು.

ಹಬ್ಬ ಇನ್ನೆರಡು ದಿನ ಇದೆ ಅನ್ನುವಾಗ ಸಹಕಾರ ಸಂಘದ ಕಡೆ ಹೋದೆ ಗ್ರಾಹಕರ ದೊಡ್ಡ ಕ್ಯೂ ನಿಂತಿತ್ತು. ಪಟಾಕಿ ಮಾರಾಟಕ್ಕೆ ಒಂದು ಕ್ಯೂ ಇತರ ವಸ್ತುಗಳಿಗೆ ಮತ್ತೊಂದು ಕ್ಯೂ ''50% ರಿಯಾಯಿತಿ ಮಾರಾಟ'' ಎಂಬ ದೊಡ್ಡ ಬ್ಯಾನರ್‌ಗಳನ್ನು ಹಾಕಲಾಗಿತ್ತು.

ನನ್ನ ಯೋಜನೆ ಯಶಸ್ವಿಯಾಗಿದ್ದಕ್ಕೆ ಖುಷಿಯಾಯ್ತು ನನ್ನ ನೋಡಿ ಗ್ರಾಹಕರು ಗೌರವದಿಂದ ನಮಸ್ಕಾರ ಮಾಡಿದರು. ನಾನು ಹೆಮ್ಮೆಯಿಂದ ಬೀಗುತ್ತಾ ಒಳಗೆ ನಡೆದೆ. ಉಗ್ರಾಣಕ್ಕೆ ಭೇಟಿ ನೀಡಿದೆ ಅಲ್ಲಿ ನನಗೆ ಆಶ್ಚರ್ಯ ಕಾದಿತ್ತು. ಸುಮಾರು 50 ಜನ ಕೆಲಸಗಾರರು ಬಿಡುವಿಲ್ಲದೆ ವಸ್ತುಗಳಿಗೆ ಬಲೆ ಚೀಟಿ ಅಂಟಿಸುವುದರಲ್ಲಿ ತೊಡಗಿದ್ದರು.

ಹೊಸ ಬಟ್ಟೆಗಳಿಗೆ, ಫ್ಯಾನ್ಸಿ ಐಟಂಗಳಿಗೆ, ಜಮಖಾನ, ಬೆಡ್‌ಷೀಟ್, ರತ್ನಗಂಬಳಿ ಇವುಗಳಿಗೆ, ಬೆಲೆ ಚೀಟಿ ತೆಗೆದುಹಾಕಿ, ಇರುವ ಬೆಲೆ ಎರಡರಷ್ಟು ಬೆಲೆ ಬರೆದ ಚೀಟಿ ಅಂಟಿಸಿ ಡಿಸ್ಕೌಂಟ್ ಮಾರಾಟಕ್ಕೆ ಕಳುಹಿಸುತ್ತಿದ್ದರು.

ಪಟಾಕಿ ಸೆಕ್ಷನ್‌ನಲ್ಲಿ ಕಳೆದ ವರ್ಷ ವ್ಯಾಪಾರವಾಗದೆ ಉಳಿದ ಪಟಾಕಿಗಳನ್ನು ಹೊಸ ಪಟಾಕಿಗಳ ಜೊತೆ ಬೆರೆಸಿ ಅವುಗಳಿಗೂ ಹೊಸ ಬೆಲೆ ಚೀಟಿ ಅಂಟಿಸುತ್ತಿದ್ದರು. ನನಗೆ ತಲೆಬಿಸಿಯಾಯಿತು. ಮ್ಯಾನೇಜರ್ ಚೇಂಬರಿಗೆ ಹೋಗಿ ಕೂಗಾಡಿದೆ.

''ಇದೆಲ್ಲ ಏನ್ರೀ ನಾನು ನೋಡ್ತಿರೋದು - ಈಗಲೇ ಜನರಿಗೆ ತಿಳಿಸಿ ವ್ಯಾಪಾರ ನಿಲ್ಲಿಸ್ತೀನಿ''

''ಸ್ವಲ್ಪ ಹೊರಗಡೆ ಕಿಟಕಿಯಲ್ಲಿ ನೋಡಿ'' ಅಂದ ಮ್ಯಾನೇಜರ್.

ಹೊರಗಟೆ ನೂಕು ನುಗ್ಗಲು, ತಾಮುಂದು -ನಾಮುಂದು ಎಂದು ಹೋಗಲು ಪ್ರಯತ್ನಿಸಿ ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು.

''ನೀವು ಈಗ ಹೋಗಿ ವ್ಯಾಪಾರ ನಿಲ್ಲಿಸಿದರೆ ನಿಮ್ಮನ್ನೇ ಹೊರಗೆ ಹಾಕ್ತಾರೆ..''

ಎಂದು ನಕ್ಕ ಮ್ಯಾನೇಜರ್ ಫ್ರಿಜ್‌ನಿಂದ ಪೆಪ್ಸಿ ತೆಗೆದು ಓಪನ್ ಮಾಡಿ ''ಕೂಲ್ ಡ್ರಿಂಕ್ಸ್ ಕುಡಿದು ತಣ್ಣಗೆ ಕುಳಿತುಕೊಳ್ಳಿ'' ಎಂದ.

ಅಸಹಾಯಕನಾದ ನಾನು ತಂಪು ಪಾನೀಯವನ್ನು ಗಟಗಟನೆ ಕುಡಿದು ಕುಸಿದು ಕುರ್ಚಿಯಲ್ಲಿ ಕುಳಿತೆ.

★★★★

ಮುಂದಿನ ಬೋರ್ಡ್ ಮೀಟಿಂಗ್‌ನಲ್ಲಿ ಡಿಸ್ಕೌಂಟ್ ಸೇಲ್ ವ್ಯಾಪಾರದ ಅನೀತಿಯ ಬಗ್ಗೆ ಮಾತನಾಡಬೇಕೆಂದಿದ್ದೆ. ಆದರೆ, ಮ್ಯಾನೇಜರ್ ಮೀಟಿಂಗ್ ಪ್ರಾರಂಭವಾಗುತ್ತಲೇ ಡಿಸ್ಕೌಂಟ್ ಸೇಲ್ಸ್‌ನಿಂದ ಲಕ್ಷಗಟ್ಟಲೆ ಲಾಭ ಬಂದಿಯೆಂದು ತಿಳಿಸಿ, ಕೆಲಸಗಾರರಿಗೆ ದೀಪಾವಳಿಗೆಂದು 20% ಬೋನಸ್ ಕೊಡುವುದಾಗಿ ಪ್ರಕಟಿಸಿದ. ಸದಸ್ಯರು ಅವನನ್ನು ಅಭಿನಂದನೆಯ ಸಾಗರದಲ್ಲಿ ಮುಳುಗಿಸಿದರು ನನ್ನ ಮಾತುಗಳು ಗಂಟಲಿನಲ್ಲೇ ಉಳಿದವು.

★★★★

ಈಗ ನನಗೆ ಡಿಸ್ಕೌಂಟ್ ಸೇಲ್ಸ್ ಬಗ್ಗೆ ಪೂರ್ಣ ನಂಬಿಕೆ ಹೊರಟು ಹೋಗಿದೆ. ಮನುಷ್ಯನ ದುರಾಸೆಯ ಲಾಭ ಪಡೆದು ಆತನನ್ನು ವಂಚಿಸಿ ತಮ್ಮ ಕಿಸೆ ತುಂಬಿಕೊಳ್ಳುವ ಜನರ ಮರ್ಜಿಗೆ ಬಲಿಯಾಗುವುದು ನನಗೆ ಬೇಕಿರಲಿಲ್ಲ.

''50% ಡಿಸ್ಕೌಂಟಿಗೆ ಹೊಸ ಪದಾರ್ಥ ಬೇಕೆಂದು ಯಾರಾದರೂ ಬಯಸಿದರೆ ಅವರಿಗೆ ಸಾಚಾ ಪದಾರ್ಥ ಕೊಡಲು ಸಾಧ್ಯವೇ ಸ್ವಾಮಿ'' ಎಂದು ಒಬ್ಬ ಅಂಗಡಿಯವನು ಹೇಳಿದ ಮಾತುಗಳಲ್ಲಿ ಗಂಭೀರವಾದ ಅರ್ಥವಿದೆ ಎನಿಸಿತು.



''ಹೇಗಿದ್ರೂ ನಾಲ್ಕರಿಂದ ಆರರವರೆಗೆ ಪವರ್ ಇರೋದಿಲ್ಲ. ಅದಕ್ಕೆ ದೇವಸ್ಥಾನಕ್ಕೆ ಬಂದ್ಬಿಟ್ಟೇರೀ''

ಶಕುನಿ

- ನಾಚಿ

ಹೋದ ತಿಂಗಳು ಹೊಳೆ ನರಸೀಪುರದಲ್ಲಿ ಒಂದು ಮದುವೆಗೆ ಹೋಗಬೇಕಾಗಿ ಬಂತು. ಬೆಳಗ್ಗೆ 8ಕ್ಕೇ ಬಸ್‌ಸ್ಟಾಂಡಿಗೆ ಹೋದೆ. ಆಗತಾನೇ ಹಾಸನದ ಬಸ್ ಹೊರಟುಹೋಗಿತ್ತು. ಮುಂದಿನ ಬಸ್ಸಿಗೆ ಇನ್ನು ಅರ್ಧ ಗಂಟೆ ಇದೆಯಲ್ಲ ಅಂತ ಅಂಗಡಿಗೆ ಹೋಗಿ ಒಂದು ಡೆಕ್ಕನ್ ಹೆರಾಲ್ಡ್ ಅನ್ನೂ ಒಂದು ಕಿತ್ತಳೆ ಹಣ್ಣನ್ನೂ ಚೀಲಕ್ಕೆ ಹಾಕಿಕೊಂಡು ಬರುವ ಹೊತ್ತಿಗೆ ಬಸ್ ಬಂದು ನಿಂತಿತ್ತು. ಜನಗಳೂ ಹತ್ತುತ್ತಿದ್ದರು. ನಾನೂ ಬಸ್ ಹತ್ತಿ ಮುಂದುಗಡೆ ಕೂರೋಣವೆಂದು ಜಾಗ ಹುಡುಕುತ್ತಿದ್ದೆ. ಕಿಟಕಿ ಪಕ್ಕದ ಸೀಟಿನಲ್ಲಿ ಒಬ್ಬ ಮುದುಕರು ಕೂತಿದ್ದರು. ಅವರ ಪಕ್ಕದಲ್ಲೇ ಕೂತೆ.

ಬಸ್ ಹೊರಡಲು ಇನ್ನೂ ಸಮಯ ಇತ್ತು. ''ಟೈಂ ಪಾಸ್ ಟೈಂ ಪಾಸ್'' ಅಂಥ ಕಳ್ಳೆಕಾಯಿ ಮಾರುವವನು ಬಂದ. ನಾನು ಒಂದು ಪೊಟ್ಟಣ ಕೊಂಡೆ.

ಪಕ್ಕದ ಮುದುಕರು ಕೇಳಿದರು - ಎಷ್ಟು ಕೊಟ್ಟಿರಿ ಅದಕ್ಕೆ?

ನಾನು - ಒಂದು ರೂಪಾಯಿ.

ಪ.ಮು - ಇದಕ್ಕೆ ಒಂದು ರೂಪಾಯೇ? ಏನುಕಾಲ ಬಂತಪ್ಪಾ! 2 ಆಣೆಗೆ ಒಂದು ಸೇರು ಬರ್‍ತಾ ಇತ್ತು ಹಿಂದೆ. ಈ ಪೊಟ್ಟಣದಲ್ಲಿ ಏನು ಹತ್ತೋ ಹದಿನೈದೋ ಕಾಯಿ ಇರಬಹುದು. ಅವರಲ್ಲಿ ಎಷ್ಟು ಮುಗ್ಗಲು ಇರುತ್ತೋ ಅಂದರು.

ನಾನು ಉತ್ತರಿಸಲಿಲ್ಲ, ಪೊಟ್ಟಣದಿಂದ ಒಂದು ಕಳ್ಳೆಕಾಯಿ ಬಿಡಿಸಿ ಬಾಯಿಗೆ ಹಾಕಿಕೊಂಡೆ. ಮುಗ್ಗಲಾಗಿತ್ತು. ಬೇಗ ಇನ್ನೊಂದು ಕಾಯನ್ನು ಸುಲಿದು ತಿಂದೆ. ಅದು ಇನ್ನೂ ಮುಗ್ಗಲಾಗಿತ್ತು. ಬಾಯೆಲ್ಲ ಕೆಟ್ಟುಹೋಯ್ತು. ಕಿತ್ತಲೆ ಹಣ್ಣು ತಿಂದು ಬಾಯಿ ಸರಿ ಮಾಡಿಕೊಳ್ಳೋಣವೆಂದು ಹಣ್ಣನ್ನು ಚೀಲದಿಂದ ತೆಗೆದೆ.

ಪ.ಮು. - ಈಗ ಬರೋ ಕಿತ್ತಲೇ ಹಣ್ಣು ಎಲ್ಲಾ ಹೈಬ್ರಿಡ್ಡು. ಗಾತ್ರ ದೊಡ್ಡದಾಗಿರುತ್ತೆ ಅಷ್ಟೆ, ರುಚಿಮಾತ್ರ ಇರೋಲ್ಲ, ಬರೀ ನೀರು ಹಣ್ಣು.

ನಾನು ಮಾತಾಡಲಿಲ್ಲ. ಹಣ್ಣು ಬಿಡಿಸಿ ಎರಡು ಮೂರು ತೊಳೆ ತಿಂದೆ. ಮುದುಕ ಹೇಳಿದ ಹಾಗೇ ಬರೀ ನೀರಾಗಿತ್ತು.

ಬಸ್ ಹೊರಟಿತು. ಮುದುಕನ ಹತ್ತಿರ ಮಾತೇ ಬೇಡ ಅಂತ ಚೀಲದಿಂದ ಡೆಕ್ಕನ್ ಹೆರಾಲ್ಡ್ ತೆಗೆದೆ. ಆದರೆ ಮುದುಕ ಸುಮ್ಮನಿರಬೇಕಲ್ಲ!

ಮು-ಇವತ್ತಿನ ಪೇಪರ್‌ನಲ್ಲಿ ಏನು ವಿಶೇಷ? ಯಾವ ಅಪಘಾತ ಆಗಿದೆ? ಯಾವ ಲಂಚಪ್ರಕರಣ ಸಿಕ್ಕಿದೆ?

ನಾನು ಮಾತಾಡದೇ ಪೇಪರ್ ಬಿಚ್ಚಿದೆ. ಮೊದಲನೇ ಪುಟದಲ್ಲೇ ದಪ್ಪ ಅಕ್ಷರದಲ್ಲಿ ''ಪಂಜಾಬ್‌ನಲ್ಲಿ ಬೆಂಕಿ ಅನಾಹುತ 400 ಜನರ ಸಾವು'' ''ಜೆ.ಎಂ.ಎಂ. ಪ್ರಕರಣದಲ್ಲಿ ನರಸಿಂಹರಾಯರ ಪಾತ್ರ - ಖಚಿತ'' ಅಂತ ಇತ್ತು. ಈ ವಿಷಯಗಳನ್ನು ನಾನು ಮುದುಕನಿಗೆ ಹೇಳಲಿಲ್ಲ. ನನ್ನ ಆಸಕ್ತಿ ಇದ್ದುದ್ದು ಕ್ರಿಕೆಟ್ ಬಗ್ಗೆ. ನಮ್ಮ ಕ್ರಿಕೆಟ್ ಟೀಮಿನವರು ವೆಸ್ಟ್ ಇಂಡೀಸಿನಲ್ಲಿ ಹೇಗೆ ಆಡುತ್ತಿದ್ದಾರೆ ನಮ್ಮ ಟೆಂಡೂಲ್ಕರ್ ಎಷ್ಟು ರನ್ ಮಾಡಿದ ಅಂತ ತಿಳಿದುಕೊಳ್ಳಲು ಕೊನೇ ಪುಟ ತಿರುಗಿಸಿದೆ.

ಪ.ಮು- ಓಹೋ! ಕ್ರಿಕೆಟ್ ಸ್ಕೋರು ನೋಡ್ತಿದೀರಾ? ಈ ತೆಂಡೂಲ್ಕರ್ ನಂಬಿ ನಾವು ಕೆಟ್ಟೆವು. ಒಂದು ಸಲ ಸೆಂಚುರಿ ಹೊಡೆದರೆ ಮುಂದೆ ಹತ್ತು ಸಲ ಬೇಗ ಔಟಾಗ್ತಾನೆ.

ಮುದುಕ ಹೇಳಿದ ಹಾಗೇ ಹಿಂದಿನ ದಿನದ ಮ್ಯಾಚಿನಲ್ಲಿ 7 ರನ್ನಿಗೇ ಟೆಂಡೂಲ್ಕರ್ ಔಟಾಗಿದ್ದ.

ಬಸ್ ಕೆ.ಆರ್. ನಗರ ತಲುಪಿತು. ಮುದುಕರು ಇಳಿದುಹೋದರು, ಸದ್ಯ ತೊಲಗಿದರಲ್ಲಾ ಅಂತ ಅಂದುಕೊಂಡು ಕಿಟಕಿ ಪಕ್ಕದ ಅವರ ಸೀಟಿಗೆ ಜರುಗಿಕೊಂಡೆ, ನಿಂತಿದ್ದ ಒಬ್ಬ ಪ್ರಯಾಣಿಕರು ನನ್ನ ಪಕ್ಕದಲ್ಲಿ ಕೂತರು. ಅವರನ್ನ ''ತಾವೆಲ್ಲಿಗೆ?'' ಅಂತ ಕೇಳಿದೆ.


ಪ.ಪ್ರ-ಹಾಸನಕ್ಕೆ. ಇಲ್ಲಿಂದ 11/2 ಗಂಟೆ ಪ್ರಯಾಣ ಅಷ್ಟೆ. ಅಂದು.,

ನಾನು- 'ಈ ಕೆ.ಎಸ್.ಆರ್.ಟಿ.ಸಿ. ಬಸ್‌ನ ನಂಬೋಕಾಗತ್ತೇ! ಎಲ್ಲಿ ಕೆಟ್ಟು ಕೂತ್ಕೊಳತ್ತೋ!'' ಅಂತ ಅರಿವಿಲ್ಲದೇ ಹೇಳಿಬಿಟ್ಟೆ, ಪಕ್ಕದವರು ನನ್ನನ್ನು ಒಂದು ಥರಾ ನೋಡಿದರು.

ಚಲಿಸುತ್ತಿದ್ದ ಬಸ್ ಯಾಕೊ ನಿಂತಿತು. ಡ್ರೈವರ್ ಕೆಳಗಿಳಿದು ಬಸ್ ಹಿಂಭಾಗಕ್ಕೆ ಹೋದ, ಕಂಡಕ್ಟರ್ ಯಾಕಣ್ಣೊ? ಅಂತ ಕೇಳಿದ.

ಡ್ರೈವರ್ ಹಿಂದಿನಿಂದಲೇ ಕೂಗಿದ ''ಥತ್! ಹಾಳಾದ್ದು 2 ಚಕ್ರ ಪಂಚರ್ರು, ಬಡಕೊಂಡೆ ಈ ಬಸ್ ಕೊಡಬೇಡಿ ಅಂತ, ಕೇಳ್ಲಿಲ್ಲ.''

ಪಕ್ಕದ ಪ್ರಯಾಣಿಕರು ನನ್ನನ್ನು ಯಾಕೊ ದುರುಗುಟ್ಟಿಕೊಂಡು ನೋಡಿದರು.



-ಪಂಚ್ ಕೃಪೆ

ನಾನು ಮಿಲ್ಟ್ರಿ ಸೇರಿದ್ದು

- ಭೂಪಿ

ಮಿಲಿಟರಿ ಎನ್ನುವ ಪದವನ್ನು ಕೇಳಿದ್ದೆನೇ ಹೊರತು ಅದರ ವಿಚಾರ ನನಗೆ ಸುತರಾಂ ತಿಳಿದಿರಲಿಲ್ಲ. ನನಗೇ ಏಕೆ, ಬಹಳಷ್ಟು ಜನ ಮೈಸೂರು ಮಹಾಸಂಸ್ಥಾನದ ಪ್ರಜೆಗಳಿಗೂ ಸಹ ಅಷ್ಟೇ. ದಸರಾ ಮೆರವಣಿಗೆಯಲ್ಲಿ ಬಣ್ಣ ಬಣ್ಣದ Uniform ಧರಿಸಿ ಮಹಾರಾಜರ ಆನೆಯ ಹಿಂದೆ ಮತ್ತು ಮುಂದೆ ನಡೆಯುತ್ತಿದ್ದ 'ಮಿಲಿಟರಿ' ಜನರನ್ನಷ್ಟೇ ನಾವು ನೋಡಿದ್ದಿದ್ದು.

ನಿಜವಾದ ಮಿಲಿಟರಿಯೊಡನೆ ಮೊದಲ ಸಂಪರ್ಕ ಎಂದರೆ ನಾನು ಸೆಂಟ್ರಲ್ ಕಾಲೇಜ್ ಹಾಸ್ಟಲ್ಲಿನಲ್ಲಿದ್ದಾಗ. 1942ನೇ ಇಸವಿ ಸ್ವಾತಂತ್ರ್ಯ ಸಂಘರ್ಷಣೆಯು ಕಡೆಯ ಘಟ್ಟಕ್ಕೆ ಆಗ ತಾನೇ ನಾಂದಿ ಆಗುವುದರಲ್ಲಿತ್ತು. "Quit India' ಘೋಷಣೆ ರಾಷ್ಟ್ರಾದ್ಯಂತ ಹಬ್ಬತೊಡಗಿತ್ತು. ಒಟ್ಟಿನಲ್ಲಿ ದೇಶದಲ್ಲೆಲ್ಲಾ ಇದ್ದಂತೆ ಬೆಂಗಳೂರಿನಲ್ಲಿಯೂ ಸಹ ತನಾವ್ ಪೂರ್ಣ ವಾತಾವರಣ' (a'la, ದೂರದರ್ಶನ). ಹಾಸ್ಟಲ್ ನಲ್ಲಿ ಸಹ ಅದೇ ಸಭೆ, ಸಂಭಾಷಣೆ, ಯೋಜನೆ, ಎಲ್ಲಾ. ಬ್ರಿಟೀಷರ ವಿರುದ್ಧದ ಕಾರ್ಯಾಚರಣೆಯಲ್ಲಿ ಹೇಗೆ ಪಾತ್ರ ವಹಿಸುವುದೆಂಬುದರ ಬಗ್ಗೆ ಚರ್ಚೆ. Seniors ಎಲ್ಲಾ ಅನುಷ್ಠಾನದ ದಾರಿ ಹುಡುಕುತ್ತಿದ್ದರೆ, ನಾವು Juniors ಅವರನ್ನು ಗಂಭೀರವಾಗಿ ಗಮನಿಸಿ, ಅನುಕರಿಸುವ ಮಹತ್ವಾಕಾಂಕ್ಷೆಯಿಂದ ಕೇಳುತ್ತಿದ್ದ ಕಾಲ.

ಅಂದು ಭಾನುವಾರ. ಬೆಳಗಿನ ಮಸಾಲೆ ದೋಸೆ, ಬೆಣ್ಣೆ, ಕಾಫಿ ಉಪಹಾರವಾದ ಮೇಲೆ, ಹಾಗೇ ಬಾಲ್ಕನಿಯಲ್ಲಿ ನಿಂತು ಹರಟುತ್ತಿದ್ದೆವು. ಆಗ ಹಾಸ್ಟಲ್ ಮುಂದಿನ ರಸ್ತೆಯಲ್ಲಿ (Palace ರಸ್ತೆ) ರಸ್ತೆಯ ಇಬ್ಬದಿಯಲ್ಲೂ ಬ್ರಿಟಿಷರ ಒಂದು ಸೈನಿಕರ ತುಕಡಿ Single Line ನಲ್ಲಿ ಹಾದು ಹೋಗುತ್ತಿತ್ತು. ಖಾಕಿ ಚಡ್ಡಿ, ಗೂರ್ಖಾ hat, ammunition boots ಧರಿಸಿ, ಬಂದೂಕನ್ನು ಹೆಗಲಿಗೆ ತಗುಲಿ ಹಾಕಿ ಹೆಜ್ಜೆಗೆ ತಕ್ಕಂತೆ, ಇಂಗ್ಲೀಷ್ ಹಾಡು ಹೇಳುತ್ತು ಹೋಗುತ್ತಿದ್ದರೆ 'ದೇಶಭಕ್ತಿ'ಯಿಂದ ತುಳುಕುತ್ತಿದ್ದ ನಮಗೆಲ್ಲಾ ಉತ್ಸಾಹ ತಡೆಯಲು ಆಗಲಿಲ್ಲ. Red monkeys quit India ಲ್ಲಿ ಅಂತ ಕೂಗಲು ಷುರು ಮಾಡಿದೆವು. ಸಂಘಶ್ಚ ಬಲಂ ಎಂಬಂತೆ ನಮ್ಮ ಗುಂಪು ದೊಡ್ಡದಾದಂತೆಲ್ಲಾ ಧ್ವನಿಗಳೂ ದೈತ್ಯವಾಗತೊಡಗಿದವು. ಕೂಗಾಟ ಕರ್ಕಶವಾಗತೊಡಗಿತು. ಇದ್ದಕ್ಕಿದ್ದಂತೆ ಸಿಪಾಯಿಗಳೆಲ್ಲಾ ನಿಂತರು. ಹಾಸ್ಟಲ್ ಅನ್ನು ಸುತ್ತಿಗಟ್ಟಿ ಮೊಣಕಾಲೂರಿ ಬಂದೂಕುಗಳನ್ನು ಹಾಸ್ಟಲ್ ಅತ್ತ ತಿರುಗಿಸಿದರು. ನಿಂತ ನಮಗೆಲ್ಲಾ ಝುಂಗಾ ಬಲ ಉಡುಗಿ ಹೋಯಿತು. ಹುಡುಗರಿಂದ ತುಂಬಿದ್ದ ಬಾಲ್ಕನಿ ಸೆಕೆಂಡುಗಳಲ್ಲಿ ಖಾಲಿ ಆಯಿತು. ಇಬ್ಬರು ಅಧಿಕಾರಿಗಳಂತೆ ತೋರಿದವರು ಹಾಸ್ಟಲ್ ಒಳಗೆ ಬಂದರು. ನಾವೆಲ್ಲಾ ನಮ್ಮ ರೂಂ ಸೇರಿ ಏನೂ ತಿಳಿಯದವರಂತೆ ನಟಿಸತೊಡಗಿದೆವು. ನಮ್ಮ ಹಾಸ್ಟಲಿನ ಒಬ್ಬ Hero ಆದ ತುಳಸಿ ಧೈರ್ಯ ಮಾಡಿ ಹೊರಗೆ ಬಂದ. ಜೊತೆಯಲ್ಲಿ ಮತ್ತೆರಡು ಜನ Second

grade ಹೀರೋಗಳೂ ಇದ್ದರು. ಅಧಿಕಾರಿಗಳ ಜೊತೆ ಮಾತು ಕಥೆ ನಡೆಯಿತು. ನಮಗೆ ಕಾಣಿಸಿದ್ದು ಮೂಕಾಭಿನಯ ಮಾತ್ರ ಅಧಿಕಾರಿಗಳ ತುಟಿಗಳು ದರ್ಪದಿಂದ ಅದರುತ್ತಿರುವಂತೆ ಕಂಡರೆ, ನಮ್ಮ ಹೀರೋಗಳ ಮುಖಭಾವ, ಭಂಗಿ ಮತ್ತು ಮಾತಿನ ಧಾಟಿ ಸಮಾಧಾನ ಹೇಳುವವರಂತೆ ಕಂಡಿತು. ಸ್ವಲ್ಪ ಸಮಯದ ನಂತರ ಅಧಿಕಾರಿಗಳು ದರ್ಪ ಭಾವನೆ ತಗ್ಗಿಸಿ, ನಮ್ಮ ಹೀರೋಗಳ ಕೈ ಕುಲುಕಿ ವಾಪಸ್ ಆದರು. ತುಕಡಿ ಮುಂದೆ ಸಾಗಿತು. ಇದೇ ನನ್ನ ಮೊದಲನೇ ಅನುಭವ. ಕಾಲ ಹಾಗಿತ್ತು ಅನ್ನಿ. ಮಕ್ಕಳು ಮನೆಯಲ್ಲಿ ಅತ್ತರೆ, ರಂಪ ಮಾಡಿದರೆ 'ನೋಡು ಕೆಂಪು ಮೂತಿ ಮಿಲಿಟರಿಯವರು ಬರುತ್ತಿದ್ದಾರೆ' ಅಂದರೆ ಸಾಕು ಸಾಧು ಪ್ರಾಣಿಗಳಾಗುತ್ತಿದ್ದ ಕಾಲ.

ಕಾಲ ಉರುಳಿ 1947ಕ್ಕೆ ಬಂತು. ಹಿಂದೂ ಮುಸ್ಲಿಂ ತಿಕ್ಕಾಟ ಮತ್ತೆ ಜೋರಾಯಿತು. ಚೂರಿ, ಚಾಕು, ಸಂಸ್ಕೃತಿ ಬೃಹದಾಕಾರವಾಗಿ ಬೆಳೆಯತೊಡಗಿತು. ಆಗ ನಾನು ಇಂಜಿನಿಯರಿಂಗ್ ಕಾಲೇಜಿನಲ್ಲಿ (ಇದ್ದದ್ದು ಒಂದೇ ಕಾಲೇಜು BMS ಷುರು ಆಗಿ ಎರಡು ವರ್ಷ ಆಗಿತ್ತೇನೋ, ಅಷ್ಟೆ) final Year ನಲ್ಲಿದ್ದೆ. ಆಗ ಸ್ವತಂತ್ರ ಭಾರತದ ಸೈನ್ಯ ಸಶಸ್ತ್ರ ಪಡೆಗೆ ಯುವಕರನ್ನು ಭರ್ತಿ ಮಾಡುವ ಸನ್ನಾಹ ನಡೆದಿತ್ತು. ನಮ್ಮ ಕಾಲೇಜಿನಿಂದ ಸುಮಾರು 29 'ದೇಶಭಕ್ತ ಯುವಕರು' ವಾಯುಪಡೆ ಕರೆ ಮೇರೆಗೆ Dehra Dun ಗೆ Interview ಗೆ ಹೋಗಲು ಉತ್ಸುಕತೆ ತೋರಿಸಿದೆವು. Air Force, Army, Navy ಇವುಗಳ ಯಾವ ಗಂಧವೂ ಯಾರಿಗೂ ಇರಲಿಲ್ಲ. ಸರ್ಕಾರದ ಖರ್ಚಿನಲ್ಲಿ ದೂರದ ಪ್ರಯಾಣದ ಆಸೆ, ಆಮಿಷ, ಅದೂ ಆಗಿನ ಕಾಲದ II class ನಲ್ಲಿ ಅಂದರೆ, ಈಗಿನ ಕಾಲದ I Class ಗಿಂತ ಉತ್ತಮವಾದ ರೈಲು ಡಬ್ಬಿಗಳಲ್ಲಿ ಜೊತೆಗೆ ಖರ್ಚು ಕಳೆದು ಕೈಗೆ ಅಲ್ಪ ಸ್ವಲ್ಪ ದುಡ್ಡು ಕೂಡ ಸಿಗುತ್ತಿತ್ತು. (ಅಲ್ಪ ಸ್ವಲ್ಪ ಅಂದರೆ ಏನು - ನನ್ನ ಮಟ್ಟಿಗೆ ಹೇಳುವುದಾದರೆ ಒಂದು Woollen coat, Worsted Woollen pant Dehra Dun ನಲ್ಲೆ ಹೊಲೆಸಿದ್ದಲ್ಲದೆ ಶ್ರೀಕಂಠಯ್ಯನ ಅಂಗಡಿ ಕೈ ಸಾಲ (ಕಡಲೇಕಾಯಿ ಬೀಜ, ಬಾಳೇ ಹಣ್ಣು ಇತ್ಯಾದಿ) ಕೂಡಾ ತೀರಿಸುವ ಮಟ್ಟಿಗೆ! ಇವೇ ಮುಖ್ಯ ಆಕರ್ಷಣೆಗಳಾಗಿದ್ದವು ಕೋಮುವಾರು ಗಲಾಟೆಯಿಂದ ನಮಗೆ ರೈಲ್ವೆ ಸ್ಟೇಷನ್ ತಲುಪಲು ಸಾಧ್ಯವಾಗದಿರಬಹುದೆಂದು ಮಿಲ್ಟ್ರಿ ಟ್ರಕ್ ಬಂದು ಎಲ್ಲರನ್ನೂ ಅವರವರ ಮನೆ ಸಮೀಪದಿಂದಲೇ Pick up ಮಾಡಿತು. ನಮಗೆಲ್ಲರಿಗೂ ಆತಂಕಭರಿತ ಸಂಭ್ರಮ Dehra Dun ಸೇರಿದೆವು. ಮೂರು ದಿನಗಳ test ನಂತರ 27 ಮಂದಿ ಸೋತೆವು. ಚುನಾಯಿಸಲ್ಪಟ್ಟ ನಮ್ಮ ಮಿಕ್ಕ ಇಬ್ಬರು ಸಂಗಾತಿಗಳು ಮತ್ತು ಒಬ್ಬ ಬೊಂಬಾಯಿಯವ Medical test ಗೆ ಡಿಲ್ಲಿಗೆ ಹೋದರು. ನಾವೆಲ್ಲಾ ಬಂದ ದಾರಿಗೆ ಸುಂಕವಿಲ್ಲದಂತೆ ಬೆಂಗಳೂರಿಗೆ ವಾಪಸ್ ಆದೆವು. ಇದೇ ನನ್ನ ಎರಡನೇ ಬಾರಿಯ ಸಂಪರ್ಕ - ತಿಳುವಳಿಕೆಯಲ್ಲಿ ಅಲ್ಪ ಸ್ವಲ್ಪ ವೃದ್ಧಿ.

ಇಂಜಿನಿಯರಿಂಗ್ ಮುಗಿಸಿ ಮದರಾಸ್ ಸರ್ಕಾರದ Electricity Department ನಲ್ಲಿ ಜೂನಿಯರ್ ಇಂಜಿನಿಯರ್ ಆದೆ. ನಮ್ಮ ಸಂಸ್ಥಾನದ ಘನ ಸರ್ಕಾರದವರು

ನಮ್ಮಂಥ 'ಮುಂದುವರೆದ' ಜನಾಂಗದವರಿಗೆ ಅದೇ ಕೆಲಸಕ್ಕೆ ತಿಂಗಳಿಗೆ ರೂ. 85/- ಎಂದು ನಿಗದಿ ಮಾಡಿದ್ದರು. ಅದು ಎರಡು ವರ್ಷದ ನಂತರ, ಖಾಯಂ ಆದಲ್ಲಿ, 150 ರೂಪಾಯಿಗಳಿಗೆ ಏರುವ ಸಾಧ್ಯತೆ ಇತ್ತು. 'ಹಿಂದುಳಿದ' ಜನಾಂಗಕ್ಕೆ ಸೇರಿದ ನನ್ನ ಇತರ Class mate ಗಳಿಗಾದರೆ 153/- Starting. ಮದರಾಸಿನವರು ಎಲ್ಲರಿಗೂ 150/- Starting ಕೊಡುತ್ತಿದ್ದರು. ಆದರೆ 'ಮುಂದುವರಿದ ನಮ್ಮಂಥ 'ಹೊರಗಿನವರನ್ನೂ' ಯಾವಾಗ ಅಂದರೆ ಆವಾಗ ಕೆಲಸದಿಂದ ತೆಗೆದು ಹಾಕಲು ಅಧಿಕಾರ ಕೈಯ್ಯಲ್ಲಿಟ್ಟುಕೊಂಡಿದ್ದರು. ಆದರೇನಂತೆ 150ಕ್ಕೂ, 85ಕ್ಕೂ ಅಜಗಜಾಂತರ ವ್ಯತ್ಯಾಸ... ಆದ್ದರಿಂದ ಅಲ್ಲೇ ಸೇರಿದೆ. ಪಾಪನಾಶನಂ ಪವರ್ ಸ್ಟೇಷನ್‌ನಲ್ಲಿ ಕೆಲಸ ಸಿಗುವ ಸಂಭವ ಇತ್ತು. ದೊಡ್ಡ ಪವರ್ ಸ್ಟೇಷನ್‌ನಲ್ಲಿ ಅನುಭವ ಪಡೆದು ಭಾರಿ ಹೆಸರಾಂತ ಇಂಜಿನಿಯರ್ ಆಗುವ ಕನಸು.

ಕನಸು ನನಸಾಗಲಿಲ್ಲ ಮದರಾಸಿನಲ್ಲೇ ಆಫೀಸಿನಲ್ಲಿ ಕುಳಿತು File ನೂಕುವ ಕೆಲಸ. 8-10 ತಿಂಗಳಿಗೆಲ್ಲಾ ಸಾಕಾಗಿ ಹೋಯಿತು. ವಾಯುಪಡೆಯ ಸಂಪರ್ಕ ನನ್ನ ಮೆದುಳನ್ನು ಸ್ವಲ್ಪ ಕೆದಕಿತ್ತು. ಅದೂ ಅಲ್ಲದೆ ರಕ್ಷಾಪಡೆಯಲ್ಲಿ Commission ಅಂದರೆ 350/- Starting ಜೊತೆಗೆ ಘನತೆ, ಗೌರವ, ಖುಷಿ ಜೀವನ, ದೇಶಸೇವೆಗೆ ಅವಕಾಶ. ಇತ್ಯಾದಿ, ಇತ್ಯಾದಿ. ಆಮಿಷಗಳು. ಮಾದರಾಸಿನಲ್ಲಿದ್ದ ವಾಯುಪಡೆಯ Recruiting ಅಧಿಕಾರಿಯತ್ತ ಅಲೆದಾಡಿದೆ. ಅಷ್ಟರಲ್ಲಿ News paper ನಲ್ಲಿ Army ಯಲ್ಲಿ ಎಂಜಿನಿಯರುಗಳ ಭರ್ತಿಗಾಗಿ ಬಂದಿದ್ದ ಜಾಹೀರಾತು ನೋಡಿದೆ. ಬೆಂಗಳೂರಿನಲ್ಲಿ ಸಂದರ್ಶನ ಅದೇ II Class ಪ್ರಯಾಣ. ಜೇಬಿನಲ್ಲಿ ನಾಲ್ಕು ಕಾಸು ಜೊತೆಗೆ ತೌರುಮನೆ visit! ಬಂದೆ ಗೆದ್ದೆ. Medical ಆಯಿತು ಆದರೆ ಕರೆ ಬರಲು ತಡವಾಯಿತು. ಅಷ್ಟರಲ್ಲೇ ವಾಯುಪಡೆಯಿಂದ ಡೆಹ್ರಾಡೂನ್ ನಲ್ಲಿ ಎರಡನೆ ಸಂದರ್ಶನಕ್ಕಾಗಿ ಕರೆ. ಭಾರತ ದರ್ಶನ ಶುರು ಆಗುವ ಸೂಚನೆ ಕಂಡುಬಂತು. ಹೊರಟೆ ಈ ಸಲ ಗೆದ್ದೆ.... ಆದರೆ ತಕ್ಷಣ ಸೋಲೂ ಸಹ. Army ನನ್ನನ್ನು Select ಮಾಡಿದೆಯೆಂದು ಸಮಾಚಾರ ಪಡೆದುಕೊಂಡ ವಾಯುಪಡೆ ನನ್ನ ಸೇವೆಯನ್ನು ಬಯಸಲಿಲ್ಲ. ಏನಾದರೇನು.... Army Navy, Airforce ಯಾರ ಸೇವೆಗಾದರೂ ಸಿದ್ಧನಾಗಿಯೇ ಇದ್ದೆ. ವಾಪಸ್ ಬರುವಾಗ ದೆಹಲಿಯಲ್ಲಿ Hindustan times ನಲ್ಲಿ ನನ್ನ ಹೆಸರು ಕಂಡೆ. ಮೈಸೂರಿಗೆ "Hero' ಆಗಿ ಬಂದೆ.

ಡೆಹ್ರಾಡೂನಿನ ಮಿಲಿಟರಿ ಅಕಾಡಮಿಯಲ್ಲಿ ಒಂದು ವರ್ಷ ತರಬೇತಿ. ಹೋಗಿ ಸೇರುವುದಕ್ಕೆ ಕಾಲಾವಕಾಶ ಕಮ್ಮಿ ಇತ್ತು. ಒಂದೇ ದಿನದಲ್ಲಿ ಕಾಲರಾ, ಟೈಫಾಯಿಡ್ ಮತ್ತು ಪ್ಲೇಗ್ Inoculation ಚುಚ್ಚಿಸಿಕೊಂಡೆ. ಜೊತೆಗೆ Vaccination ಸಹ ತೆಗೆದುಕೊಂಡೆ 104, 105 ಡಿಗ್ರಿ ಜ್ವರ ತಂದುಕೊಂಡೆ. ತಾಯಿ ಮಗನನ್ನು ಈ ಸ್ಥಿತಿಯಲ್ಲಿ ಕಳುಹಿಸಲು ಅಳುಕಿದರು. ತಂದೆ 'ದಾರಿಯಲ್ಲಿ ಜ್ವರ ಇಳಿದು ಹೋಗುತ್ತೆ ಹೊರಡು' ಎಂದರು. ಹೊರಟೆ. 3 ದಿನಗಳ ರೈಲು ಪ್ರಯಾಣದ ನಂತರ (ಅದೇ II Class ಈಗಿನ

I Class ಗಿಂತ ಉತ್ತಮವಾದದ್ದು) ಡೆಹ್ರಾಡೂನ್ ತಲುಪಿದೆ.

ರೈಲು ನಿಲ್ದಾಣ ತಲುಪಿದೊಡನೆಯೇ ಆಗಿದ್ದು ಮೊದಲನೆಯ ಆಘಾತ. ನನ್ನಂಥಹವರನ್ನು ಕರೆದುಕೊಂಡು ಹೋಗಲು ಬಂದಿದ್ದ ವಾಹನದ ಜೊತೆ ಒಬ್ಬ ಅಧಿಕಾರಿ ರೈಲು ಇಳಿಯುತ್ತಿದ್ದಂತೆ ಅಧಿಕಾರಿಯ ದರ್ಪಕ್ಕೆ ಬಲಿ. ಮನಸ್ಸಿಗೆ ಏನೋ ಒಂದು ಥರ ಮುಜುಗರ, ಅಸಮಾಧಾನ, ಆತಂಕ. Academy ಸೇರಿದೊಡನೆಯೇ ಮೊದಲ ಕಾರ್ಯ "Form Filling' ಬಿಸಿಲಿನಲ್ಲಿ (ಛಳಿಗಾಲ ಅನ್ನಿ) ಸಾಲಾಗಿ ಎಲ್ಲರೂ ನಿಂತಿದ್ದೆವು. ಇದ್ದಕ್ಕಿದ್ದಂತೆ ನೋಡಿದೆ... ಮೂರು ನಾಲಕ್ಕೂ ಜನ ಸಹಪಾಠಿಗಳು ನನ್ನನ್ನು ನೆಲದಿಂದ ಮೇಲಕ್ಕೆ ಎತ್ತಿ ನಿಲ್ಲಿಸುತ್ತಿದ್ದರು. ನಿಂತೆ, ಮೈ, ಕೈ ಮೇಲೆಲ್ಲಾ ತರಚಲು ಗಾಯಗಳು Symmetrical ಆಗಿ... ಅಲ್ಲಿದ್ದ ಅಧಿಕಾರಿಯ ತಾತ್ಸಾರದ ನೋಟ ಬೇರೆ ನನ್ನ ಕಡೆ... ಆಗಿದ್ದು ಇಷ್ಟೇ. ದಾರಿಯಲ್ಲಿ ನನ್ನ ಜ್ವರ ಇಳಿದ್ದರೂ ನಿಶ್ಯಕ್ತಿ ಹಾಗೇ ಉಳಿದಿತ್ತು. ನಿಂತ ಹಾಗೇ ಮುಂದಕ್ಕೆ ಮುಖ ಕೆಳಗಾಗಿ ಬಿದ್ದೆ. ಅಂತೂ ನಾನು ಮಿಲಿಟ್ರಿ ಸೇರೇ ಬಿಟ್ಟೆ. ಆದರೆ ಅಧಿಕಾರಿ ಆಗಲು ಇನ್ನು ಒಂದು ವರ್ಷ ಇತ್ತು. ಏನೇನು ಎಡರು, ತೊಡರುಗಳು ಕಾದಿವೆಯೋ ಅನ್ನುವ ಆತಂಕ ನನ್ನನ್ನು ಕಾಡಲು ಷುರು ಮಾಡಿತು. ಆದರೆ academy ಯ ತರಬೇತಿಯ ವೈಖರಿ ನನ್ನ ಆತಂಕವನ್ನು ವಿಶ್ವಾಸಕ್ಕೆ ಬದಲಿಸಿ ಬಿಟ್ಟಿತು. ಕಡೆಗೂ ನಾನೂ ಒಬ್ಬ ಮಿಲಿಟ್ರಿ ಅಧಿಕಾರಿ ಎಂದು ಅನ್ನಿಸಿಕೊಂಡೇ ಬಿಟ್ಟೆ.

(ಸತೀಷ)



''ನಾವಿಬ್ರೂ ಸೇರಿದ್ರೆ ನ್ಯಾಷನಲ್ ಡೆಮೋಕ್ರಾಟಿಕ್ ಫ್ರಂಟ್, ಗೊತ್ತಾಯ್ತಾ?''

Registered No. R G W 180

Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 00
Printed at IMPRESSIONS. 404. Sampige Road, Malleswaram, Bangalore-560 003.
Editor : M. SHIVAKUMAR.